ಬಸವೇಶ್ವರನಗರದಿಂದ ಮಾಗಡಿರಸ್ತೆಗೆ ಹೋಗುವ ರಸ್ತೆಯು ಕಾಮಗಾರಿಯನ್ನು ನಿಲ್ಲಿಸಿರುವ ಬಗ್ಗೆ

೪೫೫ (೪೫೫) ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಬೆಂಗಳೂರಿನ ಬಸವೇಶ್ವರ ನಗರದಿಂದ ಮಾಗಡಿ ರಸ್ತೆಗೆ ಹೋಗತಕ್ಕಂಥ ರಸ್ತೆಯ ಕಾಮಗಾರಿಯನ್ನು ನಿಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಅದನ್ನು ಯಾವ ಕಾರಣದಿಂದ ನಿಲ್ಲಿಸಲಾಗಿದೆ ?

ಇ) ಅದರಿಂದಾಗಿ ನಾಗರೀಕರಿಗೆ ಉಂಟಾದ ತೊಂದರೆಯು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಆ ರಸ್ತೆಯನ್ನು ಕೂಡಲೇ ನಿರ್ಮಿಸುವ ಕಾರ್ಯ ಕೈಗೊಂಡು ವಿಜಯನಗರ ಜ್ಞಾನ–ಭಾರತಿ, ಮುಂತಾದ ಪ್ರದೇಶಗಳಿಗೆ ಬಸವೇಶ್ವರನಗರದ ಮೂಲಕ ಹಾದು ಹೋಗುವ ಜನರಿಗೆ ಅನುಕೂಲ ಮಾಡಿಕೊಡಲು ಸರ್ಕಾರದವರು ಸಕಾಲಿಕ ಕ್ರಮವನ್ನು ತೆಗೆದುಕೊಳ್ಳುವರೇ ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು).—

ಅ) –ಹೌದು–

ಆ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಸೇರಿದ ೧೨೦ ಮೀ×೨೫ ಮೀ. ಜಾಗವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ವಹಿಸಿಕೊಟ್ಟಿಲ್ಲದ ಕಾರಣ ರಸ್ತೆಯ ನಿರ್ಮಾಣದ ಕಾರ್ಯವನ್ನು ನಿಲ್ಲಿಸಲಾಗಿದೆ.

ಇ) –ಹೌದು–

ಈ) –ಹೌದು–

ಅಧ್ಯಕ್ಷರು.—ಚುಕ್ಕಿಗುರುತಿಲ್ಲದ ಪ್ರಶ್ನೋತ್ತರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ಅಧ್ಯಕ್ಷರ ಅನುಮತಿಕೋರಿ ಪ್ರಸ್ತಾಪಿಸಲಾದ ವಿಷಯ.

ಅಕ್ರಮ ಸಾಗುವಳಿಯನ್ನು ಸಕ್ರಮಗೊಳಿಸುವ ಬಗ್ಗೆ

† ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಸನ್ಮಾನ್ಯ ಅಧ್ಯಕ್ಷರೇ, ಈ ಅಕ್ರಮ ಸಾಗುವಳಿಯನ್ನು ಸಕ್ರಮ ಮಾಡುವುದರಿಂದ ಇಡೀ ರಾಜ್ಯದಲ್ಲಿ ಸುಮಾರು ೧೫–೨೦ ಲಕ್ಷ ಕಡು ಬಡವರಿಗೆ ಮತ್ತು ಹರಿಜನ ಗಿರಿಜನರಿಗೆ ಅನುಕೂಲವಾಗುತ್ತದೆ. ಇವತ್ತು ರಾಜ್ಯದಲ್ಲಿ ಅಕ್ರಮ ಸಾಗುವಳಿಯನ್ನು ಸಕ್ರಮ ಮಾಡುವುದಕ್ಕೋಸ್ಕರ ಪ್ರತಿಯೊಂದು ರಾಜ್ಯದಲ್ಲಿ ಶಾಸಕರ ಅಧ್ಯಕ್ಷತೆಯಲ್ಲಿ ತಾವು ಬಂದು ಸಮಿತಿಯನ್ನು ಮಾಡಿದ್ದೀರಿ. ಸನ್ಮಾನ್ಯ ಕಂದಾಯ ಸಚಿವರಾದ ಶ್ರೀಮಾನ್ ಧರ್ಮಸಿಂಗ್ ಅವರು ಇತ್ತೀಚೆಗೆ ಕಳಿಸಿರುವ ಸುತ್ತೋಲೆಯಲ್ಲಿ ಇದುವರೆಗೆ ೧೦ ಲಕ್ಷ ೮೦ ಸಾವಿರ ಅರ್ಜಿಗಳು ಬಂದಿವೆ ಎಂದು ಅವರು ಎಲ್ಲಾ ಶಾಸಕರಿಗೆ ತಹಶೀಲ್ದಾರ್‌ರವರಿಗೆ ಹೇಳಿದ್ದಾರೆ. ಈವರೆಗೆ ಎರಡು ವರ್ಷಗಳಿಂದ ವಿಲೇವಾರಿ ಆಗಿರುವಂತಾದ್ದು ಕೇವಲ ಎರಡು ಲಕ್ಷ ಒಳ್ಳ ಸಾವಿರ ಅರ್ಜಿಗಳು ಮಾತ್ರ. ವಿಲೇವಾರಿ ಆಂದರೆ ಕೆಲವರಿಗೆ ಅರ್ಪತೆ ಇಲ್ಲ ಎಂದು ತಿರಸ್ಕರಿಸಿರುವಂತಾದ್ದು ಇದ್ದರೂ ಸಹ ೧೦೦ ಕ್ಕೆ ೯೦ ರಷ್ಟು ವಿಲೇವಾರಿ ಆಗಿದ್ದರೂ ಯಾರಿಗೆ ಸಾಗುವಳಿ ಚೀಟಿ ಕೊಡಬೇಕಾಗಿದೆಯೋ, ಅದಕ್ಕೆ ಅನೇಕ ತಾಂತ್ರಿಕ ಕಾರಣ ಮತ್ತು ಅರಣ್ಯ ಇಲಾಖೆಗೆ ಕಳುಹಿಸಬೇಕು ಎನ್ನುವ ಕಾರಣಕ್ಕೋಸ್ಕರ ಇದುವರೆಗೆ ಒಬ್ಬರಿಗೂ ನಾವು ಸಾಗುವಳಿ ಚೀಟಿ ಕೊಡುವುದಕ್ಕೆ ಆಗಿಲ್ಲ. ಇನ್ನು ಅಕ್ರಮ ಸಾಗುವಳಿಯನ್ನು ಸಕ್ರಮ ಮಾಡುವುದಕ್ಕೆ ೧೦ ಲಕ್ಷ ೮೬ ಸಾವಿರ ಜನ ಅರ್ಜಿ ಕೊಟ್ಟಿರುವುದರಲ್ಲಿ ೨೫ ಲಕ್ಷದ ೮ ಸಾವಿರ ಎಕರೆ ಜಮೀನಿಗೆ ಸಂಬಂಧಪಟ್ಟದ್ದು. ಎರಡು ಲಕ್ಷ ಒಳ್ಳ ಸಾವಿರ ಅರ್ಜಿಗಳನ್ನು ವಿಲೇವಾರಿ ಮಾಡಿದ್ದೇವೆಂದು

ಹೇಳುವುದರಲ್ಲಿ ೫ ಲಕ್ಷ ೬೭ ಸಾವಿರ ಎಕರೆಗೆ ಸಂಬಂಧಪಟ್ಟಂತೆ ಮಾತ್ರ ವಿಲೇವಾರಿಯನ್ನು ಮಾಡಲಾಗಿದೆಯೆಂದು ಸನ್ಮಾನ್ಯ ಮುಖ್ಯಮಂತ್ರಿಗಳು ಸದನದ ಒಳಗೆ ಮತ್ತು ಹೊರಗೆ ಹೇಳಿಕೆಯನ್ನು ಕೊಟ್ಟರು. ಹಾಗೂ ಆಕ್ಟೋಬರ್ ೯೦ರ ಒಳಗೆ ಈ ಎಲ್ಲಾ ಅರ್ಜಿಗಳನ್ನು ವಿಲೇವಾರಿ ಮಾಡಿ ಅವರಿಗೆ ಸಾಗುವಳಿ ಚೀಟಿಯನ್ನು ಕೊಡುವ ಕ್ರಮವನ್ನು ರೂಪಿಸುತ್ತೇವೆ ಎಂಬ ಮಾತನ್ನು ಹೇಳಿದರು. ಆದರೆ ನೀವು ಕೊಟ್ಟಿರತಕ್ಕ ಅಂಕಿಅಂಶಗಳ ಪ್ರಕಾರ ಶೇ ೨೫ ರಷ್ಟು ಅರ್ಜಿಗಳನ್ನು ಸಹ ನಮ್ಮ ತಾಲ್ಲೂಕು ಸಮಿತಿಗಳಲ್ಲಿ ವಿಲೇವಾರಿ ಮಾಡಿಲ್ಲ. ಇದಕ್ಕೆ ಬಹಳ ಮುಖ್ಯ ಕಾರಣ ಯಾವುದೆಂದರೆ ಇವತ್ತು ಅಗತ್ಯವಾಗಿ ಬೇಕಾದಂಥ ಸರ್ವೆಯರುಗಳು ಇಲ್ಲ. ಮಾನ್ಯ ಕಂದಾಯ ಸಚಿವರು ಕಳುಹಿಸಿರುವ ಸುತ್ತೋಲೆಯಲ್ಲಿ ಏನು ಹೇಳಿದ್ದಾರೆಂದರೆ ಪ್ರತಿ ತಾಲೂಕಿಗೂ ಈ ಸಮಿತಿ ಸೇರಬೇಕು. ಕನಿಷ್ಟ ಪಕ್ಷ ೨೫ ಅರ್ಜಿಗಳನ್ನು ವಿಲೇವಾರಿ ಮಾಡಬೇಕು. ಈ ರೀತಿ ಒಂದು ತಿಂಗಳಿಗೆ ನೂರು ಅರ್ಜಿಗಳನ್ನು ವಿಲೇವಾರಿ ಮಾಡಬೇಕು ಎಂಬ ಒಂದು ಆದೇಶವನ್ನು ಕೊಟ್ಟಿದ್ದಾರೆ. ಇವತ್ತು ಒಂದು ತಾಲ್ಲೂಕಿನಲ್ಲಿ ಒಬ್ಬಿಬ್ಬರು ಸರ್ವೇಯರುಗಳು ಇರುವಂಥ ಪರಿಸ್ಥಿತಿ ಇದೆ. ಈ ಒಬ್ಬಿಬ್ಬರು ಸರ್ವೇಯರುಗಳು ಇದ್ದರೂ ಸಹ ಅವರು ಪ್ರತಿನಿತ್ಯ ಕೆಲಸ ಮಾಡಿದರೂ ಸಹ ದಿವಸಕ್ಕೆ ಎರಡು ಮೂರು ಹಳ್ಳಿಗಳಿಗೆ ಹೋಗಿ ಅಕ್ರಮ ಸಾಗುವಳಿ ಸರಿ ಇದೆಯೋ ಇಲ್ಲವೋ ಎಂಬುದನ್ನು ನೋಡಿ ವರದಿ ಕೊಡಲು ಸಾಧ್ಯವಾಗುವುದಿಲ್ಲ. ಸಂತಹ ಪರಿಸ್ಥಿತಿಯಲ್ಲಿ ಉಳಿದಂಥ ಎಂಟೂವರೆ ಲಕ್ಷ ಅರ್ಜಿಗಳನ್ನು ಯಾವಾಗ ವಿಲೇವಾರಿ ಮಾಡಲು ಸಾಧ್ಯವಾಗುತ್ತದೆ ? ಕಳೆದ ೮-೧೦ ವರ್ಷಗಳಿಂದ ಈ ಸದನದಲ್ಲಿ ಇದು ಚರ್ಚೆ ಆಗುತ್ತಿದೆ. ಇದರ ಬಗ್ಗೆ ಈ ಸದನದಲ್ಲಿ ಪುಸ್ತಾಪ ಮಾಡಲಾಗಿದೆ. ತಾವು ದಿಟ್ಟ ನಿಲುವನ್ನು ತೆಗೆದುಕೊಂಡು ಸಮಿತಿಯನ್ನು ಮಾಡಿದ್ದೀರಿ. ಆದರೆ ಅಗತ್ಯವಾಗಿ ಬೇಕಾಗಿರುವಷ್ಟು ಸರ್ವೆಯರುಗಳನ್ನು ನೇಮಕಾತಿ ಮಾಡದಿರುವುದರಿಂದ ಈ ಕೆಲಸ ಕುಂಠಿತಗೊಂಡಿದೆ. ಇನ್ನು ಐದು ವರ್ಷಗಳಾದರೂ ಸಹ ಇದು ಕಾರ್ಯರೂಪಕ್ಕೆ ಬರುವುದು ಸಾಧ್ಯವಿಲ್ಲ. ಇನ್ನು ಎರಡನೆಯದಾಗಿ ಈ ಅರ್ಜಿಗಳನ್ನು ಪಾಕುವಂಥ ಸಂದರ್ಭದಲ್ಲಿ ಪ್ರಿಸ್‌ಕ್ರೈಬ್ಡ್ ಫಾರಂನಲ್ಲಿ ಅರ್ಜಿಗಳನ್ನು ಹಾಕಿರುವುದಿಲ್ಲ. ಕೆಲವರು ಹತ್ತಾರು ಬಾರಿ ತಹಶೀಲ್ದಾರರಿಗೆ ಅರ್ಜಿಗಳನ್ನು ಕೊಟ್ಟಿರುತ್ತಾರೆ. ಐದು ಲಕ್ಷಕ್ಕಿಂತ ಹೆಚ್ಚು ಬಡ ಜನರು ಪ್ರಿಸ್‌ಕ್ರೈಬ್ಡ್ ಫಾರಂನಲ್ಲಿ ಅರ್ಜಿ ಹಾಕಿರುವುದಿಲ್ಲ. ಇವರಿಗೆ ಸರ್ವೆ ಮಾಡಿ ಜಮೀನನ್ನು ಕೊಡುವಂತಹ ಕೆಲಸ ಆಗಿಲ್ಲ. ಹಿಂದಿನ ಸಭೆಯಲ್ಲಿ ಈ ಒಂದು ಅವಧಿಯನ್ನು ವಿಸ್ತರಣೆ ಮಾಡುತ್ತೇವೆ ಎಂದು ಹೇಳಿದ್ದೀರಿ. ಆದರಂತೆ ಸರ್ಕಾರ ಈ ಅವಧಿಯನ್ನು ವಿಸ್ತರಣೆ ಮಾಡಿದೆಯೇ ? ಇದರ ಬಗ್ಗೆ ಆದೇಶ ಕೊಟ್ಟಿದ್ದೀರಾ ? ಇನ್ನು ಬಾಕಿ ಇರತಕ್ಕ ಎಂಟು ಲಕ್ಷ ಅರ್ಜಿಗಳನ್ನು ಯಾವಾಗ ವಿಲೇವಾರಿ ಮಾಡುತ್ತೀರಿ ? ಇದನ್ನು ವಿಲೇವಾರಿ ಮಾಡಲು ಬೇಕಾದಂಥ ಸರ್ವೇಯರ್‌ಗಳನ್ನು ಯಾವಾಗ ನೇಮಕ ಮಾಡಿಕೊಳ್ಳುತ್ತೀರಿ ? ಮಾನ್ಯ ಧರ್ಮಸಿಂಗ್‌ರವರು ಕಳುಹಿಸಿರುವ ಸುತ್ತೋಲೆಯಲ್ಲಿ ದಿನಾಂಕ: ೩೧-೩-೯೪ ರೊಳಗೆ ಅಂದರೆ ಇನ್ನು ಎರಡು ದಿವಸದೊಳಗೆ ಈ ಎಲ್ಲಾ ಅರ್ಜಿಗಳನ್ನು ಪೂರ್ಣವಾಗಿ ವಿಲೇವಾರಿ ಮಾಡಲಾಗುವುದೆಂದು ಹೇಳಿದ್ದಾರೆ. ಎರಡು ವರ್ಷಗಳಿಂದ ವಿಲೇವಾರಿ ಆಗದೇ ಇರುವಾಗ, ಇನ್ನು ಕೇವಲ ಎರಡು ದಿನಗಳಲ್ಲಿ ಯಾವ ರೀತಿಯಲ್ಲಿ ಎಂಟು ಲಕ್ಷ ಅರ್ಜಿಗಳನ್ನು ವಿಲೇವಾರಿ ಮಾಡುತ್ತೀರಿ ? ಅದು ವ್ಯವಹಾರಿಕವಾಗಿ ಯಾವ ರೀತಿ ಸಾಧ್ಯ ಎಂಬುದನ್ನು ತಿಳಿಸಬೇಕು. ಇದಕ್ಕೆ ಅಗತ್ಯವಾಗಿ ಬೇಕಾಗಿರುವಷ್ಟು ಸರ್ವೆಯರ್‌ಗಳನ್ನು ನೇಮಕ ಮಾಡಿತೊಳ್ಳಲಾಗುತ್ತಿದೆಯೇ? ಎಷ್ಟು ಸರ್ವೆಯರ್‌ಗಳಿಂದ ಈ ಕೆಲಸ ಮಾಡಬೇಕು ಎಂದು ಅಂದಾಜು ಮಾಡಿದ್ದೀರಾ ? ಈ ಸರ್ವೆಯರ್‌ಗಳನ್ನು ನೇಮಕ ಮಾಡಿಕೊಳ್ಳಲು ವಿಶೇಷ ಕಾರ್ಯಕ್ರಮವನ್ನು ಏನಾದರೂ ಹಾಕಿಕೊಂಡಿದ್ದೀರಾ ? ಇನ್ನೂ ಸುಮಾರು ಐದು ಲಕ್ಷಕ್ಕೂ ಹೆಚ್ಚು ಕಡುಬಡವರು ಹತ್ತಾರು ವರ್ಷಗಳಿಂದ ಕಂದಾಯ ಇಲಾಖೆಗೆ ಸೇರಿದ ಜಮೀನುಗಳನ್ನು ಬೆಗರ್ ಹುಕ್ಕುಂ ಸಾಗುವಳಿ ಮಾಡಿಕೊಂಡಿರುತ್ತಾರೆ. ಇವರುಗಳಿಗೆ ಅರ್ಜಿ ಹಾಕಲು ಸುತ್ತೋಲೆಯನ್ನು ಹೊರಡಿಸುತ್ತೀರಾ ? ಇದು ಕಂದಾಯ ಇಲಾಖೆಗೆ ಸೇರಿದಂಥ ಜಮೀನುಗಳಾದ್ದರಿಂದ ಇದರ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಬೇಕಾಗಿದೆ.

ಇನ್ನು ರಾಜ್ಯದಲ್ಲಿ ಕಳೆದ ೨೦-೨೫ ವರ್ಷಗಳಲ್ಲಿ ಮೈನರ್ ಫಾರಸ್ಟ್‌ನಲ್ಲಿ ಅನಧಿಕೃತವಾಗಿ ಕಲ್ಟಿವೇಷನ್‌ನನ್ನು ಕಡುಬಡವರು ಮಾಡಿಕೊಂಡಿರುತ್ತಾರೆ ಎರಡಾಹೊತ್ತಿಗೆ ಗಂಜಿ ಇಲ್ಲದಂತ ಕಡುಬಡವರು ಅಕ್ರಮ ಸಾಗುವಳಿ ಮಾಡಿಕೊಂಡಿರುತ್ತಾರೆ. ಅಲ್ಲಿ ಬೂರು ಕಟ್ಟಿಕೊಟ್ಟಿದ್ದೀರಿ. ವಿದ್ಯುಚ್ಛಕ್ತಿ ವ್ಯವಸ್ಥೆ ಮಾಡಿಕೊಟಿದ್ದೀರಿ. ಮನೆಗಳನ್ನು ಕಟ್ಟಿಸಿಕೊಟ್ಟಿದ್ದೀರಿ. ಇಷ್ಟೆಲ್ಲಾ ಇದ್ದರೂ ಸಹ ಅಕ್ರಮ ಸಾಗುವಳಿಯನ್ನಾಗಿ ಮಾಡುತ್ತಿರುವಂಥ ಅರಣ್ಯ ಇಲಾಖೆಗೆ ಸೇರಿದಂಥ ಜಮೀನುಗಳು ಎಂದು ದಾಖಲೆಯಲ್ಲಿ ಸೇರಿರುವುದರಿಂದ ಇವುಗಳನ್ನು ಪಟಕ್ಕೆ ಸಕ್ರಮಗೊಳಿಸಿರುವುದಿಲ್ಲ. ಕಳೆದ ೨೦-೨೫ ವರ್ಷಗಳಿಂದ ಆರು ಏಳು ಲಕ್ಷ ಬಡ ಕುಟುಂಬಗಳವರು ಈ ರೀತಿ ಸಾಗುವಳಿ ಮಾಡಿಕೊಂಡಿರುತ್ತಾರೆ. ಅರಣ್ಯ ಇಲಾಖೆ

ಜಮೀನಿನಲ್ಲಿ ಬಗರ್‌ಹುಕಂ ಸಾಗುವಳಿ ಮಾಡಿಕೊಂಡಿರುವವರನ್ನು ಸಹ ಸಕ್ರಮಗೊಳಿಸುತ್ತೀರಾ ? ಈ ಹಿಂದೆ ಮುಖ್ಯಮಂತ್ರಿಗಳಾಗಿದ್ದ ಶ್ರೀ ಬೊಮ್ಮಾಯಿ ಅವರು ವಿರೋಧ ಪಕ್ಷದ ನಾಯಕರುಗಳ ಸಭೆಯನ್ನು ಕರೆದು ಅಲ್ಲಿ ಇದರ ಬಗ್ಗೆ ಚರ್ಚೆ ಮಾಡಿ ಈ ಎಲ್ಲಾ ಜಮೀನುಗಳನ್ನೂ ಸಹ ಕಂದಾಯ ಇಲಾಖೆಗೆ ವರ್ಗಾವಣೆ ಮಾಡಿಕೊಡಬೇಕು ಎಂಬ ದಿಟ್ಟ ನಿಲುವನ್ನು ತೆಗೆದುಕೊಂಡಿದ್ದರು. ಆದರೆ ಈಗ ಅರಣ್ಯ ಇಲಾಖೆ ಭೂಮಿಯಲ್ಲಿ ಬಗರ್ ಹುಕಂ ಸಾಗುವಳಿ ಮಾಡಿರುವ ಬಡವರನ್ನು ಒಕ್ಕಲೆಬ್ಬಿಸುತ್ತಿದ್ದಾರೆ, ಇದು ನಿಲ್ಲಬೇಕು. ಅವರಿಗೆ ಸಾಗುವಳಿ ಚೀಟಿ ಕೊಡುವಂಥ ಕೆಲಸ ಮಾಡಬೇಕು ಅರಣ್ಯ ಇಲಾಖೆಯಲ್ಲಿ ಪ್ರತಿನಿತ್ಯ ಈ ರೀತಿ ೨೦-೨೫ ವರ್ಷಗಳಿಂದ ಬಗರ್ ಹುಕಂ ಸಾಗುವಳಿ ಮಾಡಿ ಕೊಡಿರತಕ್ಕ ಬಡವರನ್ನು ಒಕ್ಕಲೆಬ್ಬಿಸಿ ಅವರ ಜಮಿನಿಗೆ ಫೆನ್‌ಸಿಂಗ್ ಹಾಕುತ್ತಿದ್ದಾರೆ. ಕಲ್ಲು ನೆಡುತ್ತಿದ್ದಾರೆ ಈ ಕೆಲಸ ನಡೆಯುತ್ತಿರುವುದರಿಂದ ಲಕ್ಷಾಂತರ ಜನ ಕಡುಬಡವರು, ಹಿಂದುಳಿದವರು ಹಾಗೂ ಹರಿಜನ ಗಿರಿಜನರು ಬಹಳ ತೊಂದರೆಗೀಡಾಗಿದ್ದಾರೆ ಇದರ ಬಗ್ಗೆ ಸರ್ಕಾರದ ಸ್ಪಷ್ಟ ನಿಲವು ಏನೆಂಬುದನ್ನು ತಿಳಿಸಬೇಕು. ಅರಣ್ಯ ಇಲಾಖೆಗೆ ಸೇರಿದಂಥ ಜಮೀನನ್ನು ಅಕ್ರಮ ಸಾಗುವಳಿ ಏನು ಮಾಡುತ್ತಿದ್ದಾರೆ. ಅವರಿಗೆ ಸಾಗುವಳಿ ಚೀಟಿ ಕೊಡಲು ಸರ್ಕಾರ ಏನಾದರೂ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತದೆಯೇ ಎಂಬುದನ್ನು ತಿಳಿಸಬೇಕು. ಇನ್ನು ಎರಡು ದಿವಸದಲ್ಲಿ ಈ ಸದನದಲ್ಲಿ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೀರಾ ? ಅನೇಕ ಸಮಸ್ಯೆಗಳು ಚರ್ಚೆಯಾಗದೇ ಇರತಕ್ಕಂಥ ಸಂದರ್ಭದಲ್ಲಿ ಸಹಜವಾಗಿ ಲಕ್ಷಾಂತರ ಜನ ಅಕ್ರಮ ಸಾಗುವಳಿದಾರರು ಅಂದರೆ ಕಡುಬಡವರು. ಈ ಸದನದಲ್ಲಿ ತಮ್ಮ ಸಮಸ್ಯೆ ಚರ್ಚೆಯಾಗುತ್ತದೆ ಹಾಗೂ ತಮಗೆ ಪರಿಹಾರ ಸಿಗುತ್ತದೆ ಎಂದು ಚಿಂತೆ ಮಾಡುತ್ತಿರುವ ಸಂದರ್ಭದಲ್ಲಿ ಸರ್ಕಾರದ ನಿಲುವೇನು ಎಂಬುದನ್ನು ಸ್ಪಷ್ಟವಾಗಿ ತಿಳಿಸಬೇಕೆಂದು ನಾನು ಅತ್ಯಂತ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

† ಶ್ರೀ ಕೆ. ಎಸ್. ಈಶ್ವರಪ್ಪ (ಶಿವಮೊಗ್ಗ).—ಮಾನ್ಯ ಅಧ್ಯಕ್ಷರೆ, ಇದು ತುಂಬಾ ಪ್ರಮುಖವಾದ ವಿಚಾರವಾಗಿದೆ. ಬಗರ್‌ಹುಕುಂ ಸಾಗುವಳಿ ಮಾಡತಕ್ಕವರಿಗೆ ಖಾಯಂ ಮಾಡುತ್ತೇವೆ, ಅವರಿಗೆ ಸಾಗುವಳಿ ಚೀಟಿ ಕೊಡುತ್ತೇವೆ ಎಂಬ ಸರ್ಕಾರದ ಘೋಷಣೆ ಸ್ವಾಗತಾರ್ಹವಾದುದು. ಆದರೆ ಎರಡು ವರ್ಷಗಳಲ್ಲಿ ಎಷ್ಟು ಜನರಿಗೆ ಸಾಗುವಳಿ ಚೀಟಿ ಕೊಟ್ಟಿದ್ದೀರಿ ಎಂಬುದನ್ನು ನೋಡಿದರೆ ಒಬ್ಬರಿಗೂ ಕೊಟ್ಟಿಲ್ಲ ಎಂಬುದು ಗೊತ್ತಾಗುತ್ತದೆ. ಇನ್ನು ಎರಡನೆಯದಾಗಿ ಸರ್ವೆಯರ್‌ಗಳ ಬಗ್ಗೆ ಶ್ರೀ ಯಡಿಯೂರಪ್ಪನವರು ಹೇಳಿದ ಹಾಗೆ ಒಂದೊಂದು ತಾಲ್ಲೂಕಿನಲ್ಲಿ ಕೇವಲ ಒಬ್ಬೊಬ್ಬರು ಸರ್ವೆಯರ್‌ಗಳು ಇದ್ದಾರೆ; ಅವರನ್ನೂ ಸಹ ಚುನಾವಣೆ ಕೆಲಸಕ್ಕೆ ಕರೆದುಕೊಂಡು ಹೋಗುತ್ತಾರೆ. ಹೀಗಾದರೆ ಯಾವಾಗ ಅವರು ಸರ್ವೆ ಮಾಡಬೇಕು ? ಯಾವಾಗ ಸಮಿತಿ ಮುಂದೆ ಅರ್ಜಿ ಬರಬೇಕು ಯಾವಾಗ ಚರ್ಚೆಯಾಗಬೇಕು ? ಇನ್ನು ಸರ್ವೆ ಮಾಡಬೇಕಾದರೆ ಬಡವರುಸಹ ನೂರು, ಎರಡು ನೂರು, ಐದುನೂರು, ಮತ್ತ ಸಾವಿರ ರೂ. ಗಳೆನ್ನು ಕೊಡಬೇಕು. ಅವರು ಕೊಡದೇ ಇದ್ದರೆ ಸರ್ವೆ ಮಾಡುವುದಿಲ್ಲ. ಇಂತಹ ವಿಚಿತ್ರ ಪರಿಸ್ಥಿತಿ ಇದೆ. ೧೦-೧೫ ವರ್ಷಗಳ ಕೆಳಗೆ ಅಲ್ಲಿ ಬೆಳೆದಂಥ ಗಿಡಗಂಟಿಗಳನ್ನು ಕಿತ್ತುಹಾಕಿ ಹಾವು, ಚೇಳು ಇದ್ದ ಭೂಮಿಯನ್ನು ಹದ ಮಾಡಿದ್ದಾರೆ ತಾವು ಗಂಜಿ ಕುಡಿದು ಜೀವನ ಮಾಡಲು ಸಾಧ್ಯವಾಗುತ್ತದೆ ಎಂಬ ಉದ್ದೇಶದಿಂದ ಅವರುಗಳು ಬಹಳ ಕಷ್ಟಪಟ್ಟು ಇಷ್ಟೆಲ್ಲಾ ಮಾಡಿಕೊಂಡಿರುವ ಸಂದರ್ಭದಲ್ಲಿ ಸರ್ಕಾರ ಆ ಜಮೀನುಗಳಿಗೆ ಸಾಗುವಳಿ ಚೀಟಿ ನೀಡುವುದು ಅತ್ಯಾವಶ್ಯಕ. ನೀವು ಸಾಗುವಳಿ ಚೀಟಿ ಕೊಡುತ್ತೇವೆಂದು ಘೋಷಣೆ ಮಾಡಿದ್ದೀರಿ ಆದರೆ ಇಲ್ಲಿಯವರೆಗೆ

೧೨-೧೫ ಪಿ ಎಂ.

ಕೊಟ್ಟಿರುವುದಿಲ್ಲ. ಈ ಜನರ ಅಪೇಕ್ಷೆಗೆ ತಕ್ಕಂತೆ ಕಾರ್ಯಪ್ರವೃತ್ತರಾಗಬೇಕಾಗುತ್ತದೆ. ಇವತ್ತು ಸರ್ಕಾರದವರೇಕೊಟ್ಟಿರುವ ಅಂಕಿಅಂಶಗಳ ಪ್ರಕಾರ ೨೫ ಪರ್ಸೆಂಟ್ ಕೂಡ ಕೆಲಸ ಆಗಿಲ್ಲ. ಇಲ್ಲಿ ಬಹಳ ಸ್ಪಷ್ಟವಾಗಿ ಮಾನ್ಯ ಮಂತ್ರಿಗಳು ಹೇಳಿದ್ದಾರೆ. ೯೧ ರ ಜುಲೈನಲ್ಲಿ ಇದ್ದ ಪ್ರಕಾರ ಸಕ್ರಮಗೊಳಿಸಲು ಅಪೇಕ್ಷಿಸಿ ಬಂದ ೧೦ ಲಕ್ಷ ೮೬ ಸಾವಿರ ಅರ್ಜಿಗಳ ಪೈಕಿ ಕೇವಲ ೨.೪೪ ಲಕ್ಷ ಅರ್ಜಿಗಳು ಮಾತ್ರ ವಿಲೇವಾರಿ ಆಗಿವೆ. ಇದು ಸರ್ಕಾರ ಕೊಟ್ಟಿರತಕ್ಕ ಅಂಕಿಅಂಶಗಳು, ಇದು ಸರ್ಕಾರದ ಸಕ್ರ್ಯುಲರ್. ೨೫.೮೬ ಲಕ್ಷ ಎಕರೆಗಳಲ್ಲಿ ಕೇವಲ ೫.೬೭ ಲಕ್ಷ ಎಕರೆಯನ್ನು ಮಾತ್ರ ಸಕ್ರಮಗೊಳಿಸಲಾಗಿತ್ತು. ಇದು ಇವರ ರೆಕಾರ್ಡ್ಸ್ ಪ್ರಕಾರ. ಆದರೆ ಅವರಿಗೆ ಇನ್ನೂ ಸಾಗುವಳಿ ಚೀಟಿ ಹೋಗಿಲ್ಲ. ಉಳಿದ ಅರ್ಜಿಗಳ ಬಗ್ಗೆ ಇನ್ನೂ ಸರ್ವೇ ಕೆಲಸವೇ ಆಗಿಲ್ಲ. ಆ ಸರ್ವೆ ನಡೆಸುವ ಪ್ರಯತ್ನ ಕೂಡ ಇನ್ನೂ ಆಗಿಲ್ಲ.

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಇಷ್ಟು ಅರ್ಜಿಗಳು ವಿಲೇವಾರಿ ಆಗಿವೆ ಎಂದು ಇವರು ಏನು ಹೇಳುತ್ತಿದ್ದಾರೆ ಇವೆಲ್ಲವೂ ಅರಣ್ಯ ಇಲಾಖೆಗೆ ಹೋಗಿ ಸೇರಿಕೊಂಡಿವೆ. ಅರಣ್ಯ ಇಲಾಖೆಯವರು ಇನ್ನೂ ಇವರಿಗೆ ಕ್ಲಿಯರೆನ್ಸ್ ಕೊಟ್ಟಿಲ್ಲ್ ಇನ್ನೊಂದು ವಿಚಾರ ಎಂದರೆ ಯಾವ ಅಧಿಕಾರಿಗೂ ಮಂಜೂರಾತಿಗಾಗಿ ಕಳುಹಿಸದೆ ತಡೆಹಿಡಿದ್ದಾರೆ. ಇವರೇ ಮಂಜೂರು ಆದೇಶವನ್ನು ನೀಡಬೇಕೆಂದು ತಾವು ಸರ್ಕ್ಯೂಲರನ್ನು ಕಳುಹಿಸಿದ್ದೀರಿ ಎಂದರೆ ಇವರೇ ನಾವು ಸಂಪೂರ್ಣವಾದ ಅಧಿಕಾರವನ್ನು ಕೊಟ್ಟಿದ್ದೇವೆಂದು ಹೇಳುತ್ತಿದ್ದೀರಿ. ಈ ದಿಕ್ಕಿನಲ್ಲಿ ಏನೇನು ಪ್ರಗತಿ ಆಗಿದೆ ಎಂಬ ಬಗ್ಗೆ ತಾವೇನಾದರೂ ವರದಿಯನ್ನು ತರಿಸಿಕೊಂಡಿದ್ದೀರಾ ? ಇವತ್ತಿನವರೆಗೆ ಎಷ್ಟು ಜನ ಬಗರ್ ಹುಕುಂ ಸಾಗುವಳಿದಾರರಿಗೆ ನೀವು ಹಕ್ಕುಪತ್ರಗಳನ್ನು ಕೊಟ್ಟಿದ್ದೀರಿ ನಾನಾದರೂ ಸ್ಪಷ್ಟವಾಗಿ ಸರ್ಕಾರವನ್ನು ಕೇಳುತ್ತೇನೆ, ಇದೇ ಆಮೆಯ ನಡಿಗೆಯಲ್ಲಿ ಈ ಸರ್ಕಾರ ಹೋಗುವುದಾದರೆ ಆ ಬಗರ್ ಹುಕುಂ ಸಾಗುವಳಿ ದಾರರಿಗೆ ಕೇವಲ ಅವನಿಗೆ ಮಾತ್ರವಲ್ಲ ಅವನ ಮೊಮ್ಮಗನಿಗೂ ಕೂಡ ಸಾಗುವಳಿ ಚೀಟಿ ಸಿಕ್ಕುವುದಿಲ್ಲ. ಅವನು ಸತ್ತು ಅವನ ಮಕ್ಕಳು ಮೊಮ್ಮಕ್ಕಳು ಹುಟ್ಟಿದರೂ ಸಾಗುವಳಿ ಚೀಟಿ ಸಿಕ್ಕುವುದಿಲ್ಲ. ಆದ್ದರಿಂದ ಇದರ ಬಗ್ಗೆ ಸರ್ಕಾರಕ್ಕೇ ಏನಾದರೂ ಕಳಕಳಿ ಇದ್ದರೆ ಹೊಸದಾಗಿ ಸರ್ವೇಯರ್‌ಗಳನ್ನು ನೇಮಕಾತಿ ಮಾಡುತ್ತೀರಾ ? ಅರ್ಜಿಗಳನ್ನು ಮತ್ತೆ ತೆಗೆದುಕೊಳ್ಳುವುದಕ್ಕೆ ಕಾಲಾವಕಾಶವನ್ನು ಕೊಡುತ್ತೀರಾ ? ಇಂತಿಷ್ಟೇ ದಿವಸದಲ್ಲಿ ಈ ಎಲ್ಲಾ ಅರ್ಜಿಗಳನ್ನೂ ವಿಲೇವಾರಿ ಮಾಡಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡುತ್ತೀರಾ ? ಏಕೆಂದರೆ ಕಳೆದಸಾರಿ ೩೧-೩-೯೪ರೊಳಗೆ ಈ ಎಲ್ಲಾ ಅರ್ಜಿಗಳನ್ನೂ ಪೂರ್ಣವಾಗಿ ವಿಲೇವಾರಿ ಮಾಡಬೇಕೆಂದು ಹೇಳಿದ್ದೀರಿ. ಆದರೆ ಈ ಕೆಲಸ ಆಗಲಿಲ್ಲ. ಇವತ್ತು ೨೯ನೇ ತಾರೀಖು ನಾಡಿದ್ದು ೩೧ನೇ ತಾರೀಖು. ಇನ್ನು ಎರಡು ದಿನದೊಳಗೆ ಬಾಕಿ ಉಳಿದಿರತಕ್ಕ ೮ ಲಕ್ಷ ಚಿಲ್ಲರೆ ಅರ್ಜಿಗಳೂ ವಿಲೇವಾರಿ ಆಗುವುದಕ್ಕೆ ಸಾಧ್ಯವೇ ? ಸಾಗುವಳಿ ಚೀಟಿಗಳನ್ನು ಕೊಡುವುದಕ್ಕೆ ಸರ್ಕಾರಕ್ಕೇನಾದರೂ ಆಸಕ್ತಿ ಇದ್ದರೆ ಈಗ ಕೂಡಲೇ ಸರ್ವೇಯರ್‌ಗಳನ್ನು ನೇಮಕ ಮಾಡುತ್ತೀರಾ ? ಅಧಿಕಾರಿಗಳಿಗೆ ಸೂಕ್ತ ಆದೇಶವನ್ನು ಕೊಡುತ್ತೀರಾ ? ಇದು ಅರಣ್ಯ ಇಲಾಖೆಗೆ ಹೋಗಬೇಕು, ಅಲ್ಲಿ ಹೋಗಬೇಕು, ಇಲ್ಲಿ ಹೋಗಬೇಕೆಂಬ ನಿರ್ಬಂಧಗಳೇನಿವೆ ಆ ನಿರ್ಬಂಧಗಳನ್ನೆಲ್ಲಾ ತೆಗೆದುಹಾಕಿ ಅವರಿಗೆ ಹಕ್ಕುಪತ್ರಗಳನ್ನು ನೀಡುವಂಥ ಅಧಿಕಾರವನ್ನು ಸಮಿತಿಯವರಿಗೆ ನೀಡುತ್ತೀರಾ ? ತಾವು ಅಧಿಕಾರವನ್ನು ಕೊಟ್ಟರೂ ಕೂಡ ಅವರು ಕ್ರಮ ತೆಗೆದುಕೊಳ್ಳದಿದ್ದರೆ ಅಂಥ ವ್ಯಕ್ತಿಗಳ ವಿರುದ್ಧ ತಾವೇನು ಕ್ರಮ ತೆಗೆದುಕೊಳ್ಳುತ್ತೀರಿ ? ಇದರ ಬಗ್ಗೆ ಸರ್ಕಾರ ನಿರ್ದಾಕ್ಷಿಣ್ಯವಾದ ಕೆಲವು ಹೇಳಿಕೆಗಳನ್ನು ಕೊಟ್ಟರೆ ಮಾತ್ರ ಇದರ ಚಟುವಟಿಕೆಗಳು ಪ್ರಾರಂಭವಾಗುತ್ತದೆ. ಸರ್ವೇಯರ್‌ಗಳನ್ನೂ ಕೊಡಬೇಕು, ತಹಸಿಲ್ದಾರ್‌ರವರೂ ಕ್ರಮ ತೆಗೆದುಕೊಳ್ಳಬೇಕು. ಈ ದಿಕ್ಕಿನಲ್ಲಿ ಸರ್ಕಾರ ಏನಾದರೂ ರೊಚನೆಯಮ್ನು ಮಾಡುತ್ತದೆಯೇ ಎಂಬುದನ್ನು ನಾನು ಮಾನ್ಯ ಉಪ ಮುಖ್ಯಮಂತ್ರಿಗಳ ಮೂಲಕ ಸರ್ಕಾರವನ್ನು ಕೇಳಬಯಸುತ್ತೇನೆ.

† ಶ್ರೀ ಎಂ. ವಿ. ವೆಂಕಟಪ್ಪ (ಮುಳಬಾಗಿಲು).—ಮಾನ್ಯ ಅಧ್ಯಕ್ಷರೆ, ಸರ್ವೇಯರ್ಸ್ ಮತ್ತು ಬೇರೆ ವಿಚಾರಗಳು ಇರಲಿ, ಶೇಖಡ ೬೦ ಭಾಗ ತಹಸಿಲ್ದಾರ್‌ರುಗಳಿಗೆ ವಾಹನಗಳೇ ಇಲ್ಲ. ನನ್ನ ತಾಲ್ಲೂಕಿನಲ್ಲಿ ಹೇಳುವುದಾದರೆ, ನಾನು ಇನ್‌ಸ್ಪೆಕ್ಷನ್‌ಗೆ ಹೋಗೋಣವೆಂದರೆ ವಾಹನಗಳೇ ಇಲ್ಲ. ಬಾಡಿಗೆಗೆ ತೆಗೆದುಕೊಳ್ಳೋಣವೆಂದರೆ, ಬಾಡಿಗೆ ಹಣವನ್ನು ಸರ್ಕಾರದವರು ಕೊಡುವುದಿಲ್ಲವೆಂದು ಹೇಳುತ್ತಾರೆ. ಸಾಮಾನ್ಯವಾಗಿ ಕಂಪಲ್ಸರಿಯಾಗಿ ಲ್ಯಾಂಡ್ಸ್‌ನ್ನು ಇನ್‌ಸ್ಪೆಕ್ಟ್ ಮಾಡಲೇಬೇಕು. ಆ ಜವಿನನ್ನು ಯಾರು ಸಾಗುವಳಿ ಮಾಡುತ್ತಿದ್ದಾರೆ, ಅದು ಎಲ್ಲಿಗೆ ಎಂಬುದನ್ನು ನಾವು ಹೋಗಿ ನೋಡಬೇಕಾಗುತ್ತದೆ. ಆದ್ದರಿಂದ ಸಾಧ್ಯವಾದಷ್ಟುಮಟ್ಟಿಗೆ ತಹಸಿಲ್ದಾರ್‌ರವರಿಗೆ ವಾಹನಗಳನ್ನು ಕೊಟ್ಟರೆ ಈ ಕೆಲಸವನ್ನು ಬೇಗನೆ ಮುಗಿಸಬಹುದೆಂದು ನನ್ನ ಅಭಿಪ್ರಾಯ ಸಂಬಂಧಪಟ್ಟ ಮಾನ್ಯ ಮಂತ್ರಿಗಳು ಇದರ ಬಗ್ಗೆ ಆದಷ್ಟುಬೇಗ ಉತ್ತರವನ್ನು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಎರಡನೆಯದಾಗಿ, ಒಂದು ವಾರದ ಹಿಂದೆ ನನ್ನ ತಾಲ್ಲೂಕಿಗೆ ಸೇರಿದ ಗುಟ್ಟಹಳ್ಳಿ ಎಂಬ ಊರಿಗೆ ಸಂಬಂಧಪಟ್ಟಂತೆ ಒಂದು ಗಮನಸೆಳೆಯುವ ಸೂಚನೆಯನ್ನು ಕಳುಹಿಸಿದ್ದೆ.

ಅಧ್ಯಕ್ಷರು.—ನಾವು ಇನ್ನೂ ಕಾಲಿಂಗ್ ಅಟೆನ್ಷನ್‌ನ್ನು ತೆಗೆದು ಕೊಂಡಿಲ್ಲ. ನಿಮ್ಮ್ಮನ್ನು ಪರಿಶೀಲನೆ ಮಾಡುತ್ತೇನೆ.

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸ್ವಾಮಿ ಅಧ್ಯಕ್ಷರೆ, ಈ ಸರ್ಕಾರ ಏನಾದರೂ ಬದುಕಿದೆಯೇ? ಏಕೆಂದರೆ ಜೀರೋ ಅವರ್‌ನಲ್ಲಿ ಅತ್ಯಂತ ಪ್ರಮುಖವಾದ ವಿಷಯಗಳನ್ನು ನಾವು ಪ್ರಸ್ತಾಪ ಮಾಡಂತ್ತೇವೆಂದು ನಾವು ತಮ್ಮ ಕೊಠಡಿಗೆ ಬಂದು ಹೇಳಿದ್ದೇವೆ.

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ ಮಾನ್ಯ ಉಪ ಮುಖ್ಯ ಮಂತ್ರಿಯವರು ಉತ್ತರವನ್ನು ಕೊಡಲಿ.

ಶ್ರೀ ಎಸ್. ಎಂ. ಕೃಷ್ಣ (ಉಪ ಮುಖ್ಯಮಂತ್ರಿಯವರು).—ಮಾನ್ಯ ಅಧ್ಯಕ್ಷರೆ, ಬಹಳ ಪ್ರಮುಖವಾದ ವಿಷಯವನ್ನು ಮಾನ್ಯ ಸದಸ್ಯರಾದ ಯಡಿಯೂರಪ್ಪನವರು, ಮಾನ್ಯ ವೆಂಕಟಪ್ಪ ನವರು ಮತ್ತು ಮಾನ್ಯ ಈಶ್ವರಪ್ಪನವರು ಪ್ರಸ್ತಾಪ ಮಾಡಿದ್ದಾರೆ. ಅಕ್ರಮ ಸಾಗುವಳಿಯನ್ನು ಸಕ್ರಮಗೊಳಿಸಬೇಕೆಂಬ ತಾತ್ವಿಕವಾದ ನಮ್ಮ ನಿಲುವು ಏನಿದೆ ಅದಕ್ಕೆ ಪೂರಕವಾಗಿ ಇದು ಆಗಲೇ ಬೇಕೆಂದು ತಾವೂ ಕೂಡ ಸೂಚನೆ ಮಾಡಿದ್ದೀರಿ. ನೀವು ಹೇಳಿರತಕ್ಕ ಎಲ್ಲಾ ಸಲಹೆಗಳನ್ನೂ ಮಾನ್ಯ ರೆವಿನ್ಯೂ ಮಂತ್ರಿಯವರ ಗಮನಕ್ಕೆ ತರುತ್ತೇನೆ ೧೦ ಲಕ್ಷ ಪ್ರಕರಣಗಳಿದ್ದರೂ ಕೂಡ ಕೇವಲ ಸುಮಾರು ಎರಡೂವರೆ ಲಕ್ಷ ಅರ್ಜಿಗಳು ವಿಲೇವಾರಿ ಆಗಿವೆ ಎಂದು ತಾವು ಹೇಳಿದ್ದೀರಿ. ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ತ್ವರಿತವಾಗಿ ತೀರ್ಮಾನ ಮಾಡುವುದಕ್ಕೆ ನಿಮ್ಮ ಸಲಹೆಗಳು ಬಹಳ ಉಪಯುಕ್ತ ವಾಗಿವೆ ಎಂದು ಹೇಳಿ ಬಾಕಿ ವಿಚಾರಗಳನ್ನು ಮಾನ್ಯ ಕಂದಾಯ ಮಂತ್ರಿಗಳಿಗೆ ತಿಳಿಸುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಒಂದಂತೂ ಬಹಳ ಪ್ರಮುಖವಾದ ವಿಚಾರ ಇದೆ. ಏನೆಂದರೆ ಸನ್ಮಾನ್ಯ ಮುಖ್ಯ ಮಂತ್ರಿಗಳು, ಈ ರೀತಿ ಅಕ್ರಮ ಸಾಗುವಳಿಯ ಜಮೀನನ್ನು ಸಕ್ರಮ ಗೊಳಿಸುವ ಬಗ್ಗೆ ಅನೇಕ ಜನ ಸಾಗುವಳಿಗಾರರು ಅರ್ಜಿಗಳನ್ನು ನಿಯಮಿತ ಅರ್ಜಿಗಳಲ್ಲಿ ಕೊಟ್ಟಿಲ್ಲ ದಿರುವುದರಿಂದ ಅರ್ಜಿ ಸಲ್ಲಿಸಲು ಅವಧಿಯನ್ನು ನಾವು ವಿಸ್ತರಣೆ ಮಾಡುತ್ತೇವೆಂದು ಇದೇ ಸದನದಲ್ಲಿ ಹೇಳಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ಇದುವರೆಗೂ ಅರ್ಜಿ ಅವರ ಕಛೇರಿಯಿಂದ ಹೊರಗೆಹೋಗಿಲ್ಲ. ಎರಡನೆಯದಾಗಿ ನಾನು ಬಹಳ ಪ್ರಮುಖವಾದ ಇನ್ನೊಂದು ಅಂಶವನ್ನು ಏನು ಹೇಳಿದೆ ಎಂದರೆ, ಇದರ ಜೊತೆಯಲ್ಲೇ ತಾವೇ ಕೊಟ್ಟಿರತಕ್ಕ ಅಂಕಿ ಅಂಶಗಳ ಪ್ರಕಾರ ನಮ್ಮ ಕರ್ನಾಟಕ ರಾಜ್ಯದಲ್ಲಿ ಸುಮಾರು ನಾಲ್ಕುವರೆ ಲಕ್ಷಕಿಂತ ಹೆಚ್ಚು ಕುಟುಂಬದವರು ಅರಣ್ಯ ಇಲಾಖೆಗೆ ಸೇರಿದಂಥ ಜಮೀನನ್ನು ಕಳೆದ ೨೦–೨೫ ವರ್ಷಕ್ಕಿಂತ ಹೆಚ್ಚು ಕಾಲದಿಂದ ಸಾಗುವಳಿ ಮಾಡಿಕೊಂಡು ಬರುತ್ತಿದ್ದಾರೆ. ಅವರುಗಳು ಯಾರೂ ಕೂಡ ಅರ್ಜಿಗಳನ್ನು ಕೊಟ್ಟಿಲ್ಲ. ಇಲ್ಲ ಅರ್ಜಿಗಳನ್ನು ಕೊಟ್ಟಿರುವವರು ಎಂದರೆ ಕೇವಲ ರೆವಿನ್ಯೂ ಲ್ಯಾಂಡ್‌ನಲ್ಲಿ ಸಾಗುವಳಿ ಮಾಡುತ್ತಿರುವವರು. ಅರಣ್ಯ ಇಲಾಖೆಗೆ ಸೇರಿದಂಥ ಮೈಸರ್ ಫಾರೆಸ್ಟ್, ಗೋಮಾಳ, ಪಿ. ಅಂಡ್ ಡಿ ಲ್ಯಾಂಡ್ ಎಂದು ಅರಣ್ಯ ಇಲಾಖೆಗೆ ವರ್ಗಾವಣೆ ನೂಪ ಅನೇಕ ಗೊಂದಲಗಳು ಉಂಟಾಗಿದ್ದು, ಕಳೆದ ೨೦–೨೫ ವರ್ಷಗಳಿಂದ ಸಾಗುವಳಿ ಮಾಡುತ್ತಿದ್ದರೂ ಅವರಿಗೆ ಸಾಗುವಳಿ ಚೀಟಿಯನ್ನು ಕೊಡದೇ ಇರುವ ಪರಿಣಾಮದಿಂದಾಗಿ ಈ ಜನರು ಯಾವುದೇ ರೀತಿಯ ಸೌಲಭ್ಯಗಳನ್ನೂ ಕೂಡ ಬ್ಯಾಂಕ್‌ಗಳಿಂದ ಪಡೆಯುವುದಕ್ಕೆ ಸಾಧ್ಯವಾಗುತ್ತಿಲ್ಲ. ಆ ಜಮೀನನ್ನು ಅಭಿವೃದ್ಧಿ ಮಾಡುವುದಕ್ಕೂ ಸಾಧ್ಯವಾಗುತ್ತಿಲ್ಲ. ಅಲ್ಲಿ ಬೋರ್‌ವೆಲ್ ಕೊರೆದು ನೀರನ್ನು ತೆಗೆದು ಕೊಂಡು ತನ್ನ ಕಾಲಮೇಲೆ ತಾನು ನಿಲ್ಲುವುದಕ್ಕೆ ಸಾಧ್ಯವಾಗುತ್ತಿಲ್ಲ. ಈ ಜನರು ಬಹಳ ಕಡು ಬಡವರು. ಶ್ರೀಮಂತರು ಅಕ್ರಮ ಸಾಗುವಳಿ ಮಾಡಿರುವುದರ ಬಗ್ಗೆ ನಾವು ಇಲ್ಲಿ ಮಾತನಾಡುತ್ತಿಲ್ಲ. ಒಂದೆರಡು ಎಕರೆ ಸಾಗುವಳಿ ಮಾಡುತ್ತಿರುವಂಥ ಸಾಮಾನ್ಯ ರೈತರು ಕಳೆದ ೨೦–೨೫ ವರ್ಷಗಳಿಂದ ಸಾಗುವಳಿಯನ್ನು ಮಾಡುತ್ತಿದ್ದರೂ ಕೂಡ ಅವರಿಗೆ ಸಾಗುವಳಿ ಚೀಟಿಯನ್ನು ಕೊಡುವುದಕ್ಕೆ ಸಾಧ್ಯ ವಾಗಿಲ್ಲ. ಆದ್ದರಿಂದ ರೆವಿನ್ಯೂ ಜಮೀನಿನಲ್ಲಿ ಅಕ್ರಮ ಸಾಗುವಳಿಯನ್ನು ಮಾಡುತ್ತಿರುವವರು ಅರ್ಜಿ ಗಳನ್ನು ಹಾಕಿಕೊಳ್ಳುವುದಕ್ಕೆ ಅವಧಿಯನ್ನು ವಿಸ್ತರಣೆ ಮಾಡಬೇಕು, ಎರಡನೆಯದಾಗಿ ಅರಣ್ಯ ಇಲಾಖೆಗೆ ಸೇರಿದ ಜಮೀನಿನಲ್ಲಿ ಸುಮಾರು ನಾಲ್ಕುವರೆ ಲಕ್ಷಕ್ಕಿಂತ ಹೆಚ್ಚು ಕುಟುಂಬದವರು ಬಗರ್ ಹುಕುಂ ಸಾಗುವಳಿಯನ್ನು ಏನು ಮಾಡುತ್ತಿದ್ದಾರೆ ಅದನ್ನು ಸಕ್ರಮಗೊಳಿಸಲು ಸರ್ಕಾರ ಒಂದು ನಿಲು ವನ್ನು ತೆಗೆದುಕೊಳ್ಳಬೇಕು. ಅರಣ್ಯವನ್ನು ಬೆಳೆಸುವ ಸಲುವಾಗಿ ನಮ್ಮ ಪಿ ಅಂಡ್ ಡಿ ಲ್ಯಾಂಡ್‌ಗೆ ಸೇರಿದ ೧೬ ಲಕ್ಷ ಎಕರೆ ಜಮೀನನ್ನು ಸರ್ಕಾರದಿಂದ ಅರಣ್ಯ ಇಲಾಖೆಗೆ ಕೊಡುತ್ತಿದ್ದೇವೆ. ಈಗಾಗಲೇ ಅಲ್ಲಿ ಊರುಗಳನ್ನು ಕಟ್ಟಿಕೊಂಡು ಬಗರ್ ಹುಕುಂ ಸಾಗುವಳಿಯನ್ನು ಮಾಡುತ್ತಿರುವುದರಿಂದ ಆ ಜಮೀನನ್ನು ಬಿಡಿಸಿಕೊಳ್ಳುವ ಪ್ರಶ್ನೆಯೇ ಬರುವುದಿಲ್ಲ. ಕೇವಲ ಕಾಗದದ ಮೇಲೆ ಮಾತ್ರ ಇದು ಅರಣ್ಯ ಇಲಾಖೆಗೆ ಸೇರಿದ್ದು ಎಂದು ಬರೆದಿದ್ದಾರೆ. ಇವತ್ತು ತಮಗೇ ಗೊತ್ತಿರುವಂತೆ ಉತ್ತರ ಪ್ರದೇಶ ಮತ್ತು ಮಧ್ಯ ಪ್ರದೇಶದಲ್ಲಿ ಈ ಹಿಂದೆ ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರವೇ ಅಧಿಕಾರ ದಲ್ಲಿದ್ದಾಗಲೇ ಸುಮಾರು ೪–೫ ಲಕ್ಷ ಕುಟುಂಬದವರು ಅರಣ್ಯ ಇಲಾಖೆಗೆ ಸೇರಿದಂಥ ಜಮೀನನ್ನು

ಬಗರ್ ಹುಕುಂ ಮಾಡುತ್ತಿದ್ದುದನ್ನು ಸಕ್ರಮಗೊಳಿಸಿ ಅವರಿಗೆಲ್ಲಾ ಸಾಗುವಳಿ ಚೀಟಿಯನ್ನು ಕೊಟ್ಟರು. ಅವರು ಈ ಕೆಲಸವನ್ನು ಪೂರ್ಣ ಮಾಡಿದ್ದು ತಮಗೆಲ್ಲಾ ಗೊತ್ತಿರಬಹುದೆಂದು ನಾನು ತಿಳಿದುಕೊಂಡಿದ್ದೇನೆ, ಆದ್ದರಿಂದ ನಾನು ಕೇಳುವ ಒಂದೆರಡು ಅಂಶಗಳಿಗೆ ತಾವು ಸ್ಪಷ್ಟವಾಗಿ ಉತ್ತರವನ್ನು ಹೇಳಬೇಕು. ಮೊದಲನೆಯದಾಗಿ, ನಿಮೇ ಹೇಳಿರುವಂಥ ಅಂಕಿಅಂಶಗಳ ಪ್ರಕಾರ ಬಗರ್ ಹುಕುಂ ಸಾಗುವಳಿಯನ್ನು ಮಾಡಿರುವಂಥ ಸುಮಾರು ೮ ಲಕ್ಷಕ್ಕಿಂತ ಹೆಚ್ಚು ಕುಟುಂಬದವರಿಗೆ ಅಗತ್ಯವಿರುವಷ್ಟು ಸರ್ವೇಯರ್‌ಗಳನ್ನು ಕೊಡಿಸಿ ಅವರಿಗೆ ಸಾಗುವಳಿ ಚೀಟಿಯನ್ನು ಕೊಡಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ ? ಎರಡನೆಯದಾಗಿ, ಅರ್ಜಿಗಳನ್ನು ಕೊಡಬೇಕಾದ ಇನ್ನೂ ೫-೬ ಲಕ್ಷ ಜನ ಯಾರಿದ್ದಾರೆ ಅವರು ಅರ್ಜಿಗಳನ್ನು ಸಲ್ಲಿಸಲು ಅವಧಿಯನ್ನು ವಿಸ್ತರಣೆ ಮಾಡುತ್ತೀರಾ? ಅರಣ್ಯ ಇಲಾಖೆಯಲ್ಲಿ ಸಾಗುವಳಿ ಮಾಡುತ್ತಿರುವವರಿಗೂ ಸಹ ಅವರವರ ಜಮೀನುಗಳನ್ನು ಅವರವರಿಗೆ ಸಕ್ರಮ ಮಾಡಿ ಸಾಗುವಳಿ ಚೀಟಿಯನ್ನು ಕೊಡುವ ಕ್ರಮವನ್ನು ತಾವು ತೆಗೆದುಕೊಳ್ಳುತ್ತೀರಾ ಎಂಬುದನ್ನು ಹೇಳಬೇಕು. ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿದೆ, ಇನ್ನು ಒಂದೆರಡು ದಿನದಲ್ಲಿ ಈ ಸದನ ಮುಗಿಯುತ್ತದೆ. ಅನೇಕ ಕಾರಣಗಳಿಂದಾಗಿ ನಾವು ಅನೇಕ ಗಂಭೀರವಾದ ವಿಚಾರಗಳನ್ನು ಚರ್ಚೆ ಮಾಡುವುದಕ್ಕೆ ಸಾಧ್ಯ ಆಗಲಿಲ್ಲ. ಇವತ್ತು ಲಕ್ಷಾಂತರ ಜನ ಬಡ ರೈತರಿಗೆ ಸಂಬಂಧಪಟ್ಟ ಮಹತ್ವದ ಈ ವಿಚಾರವನ್ನು ಪ್ರಸ್ತಾಪ ಮಾಡುವ ಈ ಸಂದರ್ಭದಲ್ಲಿ ಸಂಬಂಧಪಟ್ಟ ಮಂತ್ರಿಗಳಿಗೆ ಏಷ್ಟೇ ಕೆಲಸ ಕಾರ್ಯಗಳಿದ್ದರೂ ಅದನ್ನೆಲ್ಲಾ ಬಿಟ್ಟು ಇಲ್ಲಿಗೆ ಬಂದು ಇಲ್ಲಿ ಏನೇನು ನಡೆಯುತ್ತದೆಂಬ ವಿಚಾರಗಳಿಗೆ ಗಮನವನ್ನು ಕೊಟ್ಟು ಅದಕ್ಕೆ ಸೂಕ್ತ ಉತ್ತರವನ್ನು ಕೊಟ್ಟು ತಮ್ಮ ಕರ್ತವ್ಯವನ್ನು ಮಾಡತಕ್ಕದ್ದು ಹಿಂದಿನಿಂದಲೂ ನಡೆದುಕೊಂಡು ಬಂದಿರುವ ಪದ್ಧತಿ. ಇದಕ್ಕೆ ಸಂಬಂಧಪಟ್ಟಂತೆ ಆದೇಶವನ್ನು ಕೊಡಲು ತಾವು ಆ ಸ್ಥಾನದಲ್ಲಿ ಕೂತಿದ್ದೀರಿ. ಆದ್ದರಿಂದ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ದಯವಿಟ್ಟು ಮಾನ್ಯ ಕಂದಾಯ ಮಂತ್ರಿಯವರನ್ನು ಈ ಸದನಕ್ಕೆ ಕರೆಯಿಸಿ, ಅವರೇ ಕಳುಹಿಸಿರುವಂಥ ಆದೇಶವನ್ನು ತಮಗೆ ನಾನು ಕಳುಹಿಸಿಕೊಡುತ್ತೇನೆ. ಇನ್ನೂ ೮ ಲಕ್ಷ ಅರ್ಜಿಗಳು ವಿಲೇವಾರಿ ಆಗಬೇಕಾದುದು ಪೆಂಡಿಂಗ್ ಇವೆ ಎಂಬುದು ಅವರಿಗೆ ಗೊತ್ತಿದ್ದರೂ ಕೂಡ ಈ ತಿಂಗಳ ೩೧ನೇ ತಾರೀಖಿನೊಳಗೆ ಎಲ್ಲ ಅರ್ಜಿಗಳನ್ನೂ ಪೂರ್ಣವ್ಯಾಗಿ ವಿಲೇವಾರಿ ಮಾಡಬೇಕೆಂದು ಆದೇಶವಿದ್ದರೂ...

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು).—ಮಾನ್ಯ ಅಧ್ಯಕ್ಷರೆ, ಇದು ಪತ್ರಿಕೆಗಳಲ್ಲಿ ಬಂದಿದೆ. ಬಹುಶಃ ಇವತ್ತು ಅಥವಾ ನಿನ್ನೆ ಇರಬಹುದು, ಸಕ್ರಮಗೊಳಿಸುವ ಬಗ್ಗೆ ಬಂದಿರುವುದನ್ನು ತಾವು ಓದಿರಬಹುದು.

ಶ್ರೀ ಬಿ. ಎಸ್. ಯಡಿಯೂರಪ್ಪ.—ವಿಷಯ ಅದು ಅಲ್ಲವೇ ಅಲ್ಲ.

ಶ್ರೀ ಕೆ. ಹೆಚ್. ರಂಗನಾಥ್.—ನಾನು ಹೆಡ್ ಲೈನ್ಸ್‌ನ್ನು ನೋಡಿದ್ದೇ. ನಾನು ಅದನ್ನು ಪೂರ್ತಿ ಓದಿಲ್ಲ. ಸಕ್ರಮಗೊಳಿಸುತ್ತೇವೆಂದು ಬರೆದಿದ್ದಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನು ಹೇಳುತ್ತಿರುವುದು, ಅಕ್ರಮ ಸಾಗುವಳಿಯನ್ನು ಸಕ್ರಮಗೊಳಿಸುತ್ತೇವೆಂದು ಇವತ್ತಿನ ಪತ್ರಿಕೆಗಳಲ್ಲಿ ಬಂದಿದೆ. ಕಳೆದ ೧೦ ವರ್ಷಗಳಿಂದ ಒಂದಲ್ಲೊಂದು ರೀತಿಯಲ್ಲಿ ಪತ್ರಿಕೆಗಳಲ್ಲಿ ಬರುತ್ತಿದೆ. ಆದರೆ ವಾಸ್ತವಿಕವಾಗಿ ಅವರಿಗೆ ಸಾಗುವಳಿ ಚೀಟಿಯನ್ನು ಕೊಡುವುದಕ್ಕೆ ಏನು ಕಾರ್ಯಕ್ರಮವನ್ನು ರೂಪಿಸಬೇಕಾಗಿತ್ತೋ...

ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ಅಧ್ಯಕ್ಷರೆ, ಶಾಸಕರ ಅಧ್ಯಕ್ಷತೆಯಲ್ಲೇ ಆ ಸಮಿತಿಗಳಿವೆ ಈ ಕೆಲಸವನ್ನು ನಾವೇ ಮಾಡಬೇಕು. ಸರ್ಕಾರದವರು ಇದನ್ನು ಮಾಡಬೇಕಾದ್ದು ಏನೂ ಇಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನು ಹೇಳಿದಾಗ ತಾವು ಇರಲಿಲ್ಲ. ನಾನು ಇದನ್ನೆಲ್ಲಾ ಹೇಳಿದ್ದೇನೆ. ನಮ್ಮ ತಾಲೂಕಿನಲ್ಲಿ ಆ ಸಮಿತಿಗೆ ನಾನೇ ಅಧ್ಯಕ್ಷ. ಪ್ರತಿಯೊಂದು ತಾಲೂಕಿನಲ್ಲೂ ಶಾಸಕನೆ ಅಧ್ಯಕ್ಷತೆಯಲ್ಲಿ ಸಮಿತಿ ಇದ್ದರೂ ಕೂಡ ಅಲ್ಲಿ ಒಬ್ಬಬ್ಬರು ಸರ್ವೇಯರ್‌ಗಳು ಮಾತ್ರ ಇದ್ದಾರೆ. ಇವತ್ತು ಸಾವಿರಾರು ಅರ್ಜಿಗಳನ್ನು ಪರಿಶೀಲಿಸಿ ಸರ್ವೆ ಕೆಲಸ ಮಾಡಿ ಸಾಗುವಳಿ ಚೀಟಿಯನ್ನು ಇವರಿಗೆ ಕೊಡಬಹುದೆಂದು ಸರ್ವೇಯರ್‌ಗಳು ರಿಪೋರ್ಟ್‌ನ್ನು ಕೊಡಬೇಕಲ್ಲಾ. ಕಳೆದವರಡು ವರ್ಷದಲ್ಲಿ ಹತ್ತೂವರೆ ಲಕ್ಷ ಅರ್ಜಿಗಳಲ್ಲಿ ಕೇವಲ ಎರಡೂವರೆ ಲಕ್ಷ ಅರ್ಜಿದಾರರಿಗೆ ಮಾತ್ರ.....

ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ಸದಸ್ಯರು ಹೇಳುವುದು ಸರಿಯಿಲ್ಲ. ನನಗೆ ಲ್ಯಾಂಡ್ ರೆವಿನ್ಯೂ ಕಾನೂನು ಗೊತ್ತಿರುವ ಹಾಗೆ ಸರ್ಕಾರದ ಭೂಮಿಯನ್ನು ಯಾರಾವರೂ ಒತ್ತುವರಿ ಮಾಡಿ

ದರೆ ಅಲ್ಲಿರತಕ್ಕಂಥ ರೆವಿನ್ಯೂ ಇನ್ಸ್‌ಪೆಕ್ಟರ್ ಅದಕ್ಕೆ ಏನುಮಾಡುತ್ತಾರೆಂದರೆ ಒಂದು ಕಚ್ಚಾ ಸ್ಕೆಚ್ ತಯಾರು ಮಾಡುತ್ತಾರೆ. ಕಚ್ಚಾ ಸ್ಕೆಚ್ ಮಾಡಿ ೨ ಎಕರೆಯೋ ೩ ಎಕರೆಯೋ ೪ ಎಕರೆಯೋ ಇದ್ದರೆ ಅದಕ್ಕೆ ಸಾಗುವಳಿ ಚೀಟಿಯನ್ನು ಕೊಟ್ಟು ಬಿಡುತ್ತಾರೆ. ತದನಂತರ ಅದನ್ನು ಸರ್ವೆಮಾಡಿ ಅದಕ್ಕೆ ಬಂಡ್ ಎಲ್ಲ ಫಿಕ್ಸ್ ಮಾಡಿ ಪಕ್ಕ ಮಾಡುತ್ತಾರೆ. ಬರೆಯುವಾಗಲೂ ಕೂಡ ಸಬ್ಜೆಕ್ಟಟು ಪಕ್ಕಾ ಪೋಡಿ ಎಂದು ಬರೆದು ಮುಂದೆ ಅದಕ್ಕೆ ಏನು ಆಗುತ್ತದೆ ಅದಕ್ಕೆ ನೀವು ಒಳಗಾಗಬೇಕಾಗುತ್ತದೆಂದು ಹೇಳಿ ಸಾಗುವಳಿ ಚೀಟಿ ಮಾಡಿಕೊಡುತ್ತಾರೆ. ಆದ್ದರಿಂದ ಸರ್ವೆಯರಿಗೊಸ್ಕರವಾಗಿ ಕಾಯಬೇಕಾಗಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಿಮ್ಮ ರೆವಿನ್ಯೂ ಸಚಿವರೇ ಬರೆದಿರುವ ಪತ್ರವನ್ನು ಓದುತ್ತೇನೆ ಒಂದು ನಿಮಿಷ.

ಶ್ರೀ ಕೆ.ಹೆಚ್. ರಂಗನಾಥ್.—ಬರೆದಿರಬಹುದು. ಲ್ಯಾಂಡ್ ರೆವಿನ್ಯೂ ರೂಲ್ಸ್‌ನಲ್ಲಿ ಇರತಕ್ಕಂಥದ್ದು ಹಾಗೂ ಲ್ಯಾಂಡ್ ರೆವಿನ್ಯೂ ಕೋಡ್‌ನಲ್ಲಿರತಕ್ಕಂಥ ಒಂದು ಕಾನೂನು ಪ್ರಕಾರ ಸರ್ಕಾರದ ಭೂಮಿಯನ್ನು ಗ್ರಾಂಟ್ ಮಾಡಿದರೆ ಅಥವಾ ಸರ್ಕಾರದ ಭೂಮಿಯನ್ನು ಯಾರಾದರೂ ಒತ್ತುವರಿ ಮಾಡಿದ್ದರೆ, ಒತ್ತುವರಿ ಮಾಡಿದಂಥ ಭೂಮಿಯನ್ನು ಖಾಯಂ ಮಾಡಿದರೆ ಅದಕ್ಕೆ ಅಲ್ಲಿರತಕ್ಕಂಥ ರೆವಿನ್ಯೂ ಅಧಿಕಾರಿಗಳು, ಪ್ರಮುಖವಾಗಿ ರೆವಿನ್ಯೂ ಇನ್‌ಸ್ಪೆಕ್ಟರ್, ವಿಲೇಜ್ ಅಕೌಂಟೆಂಟ್ಸ್ ಯಾರಾದರೂ ಸರಿ ಒಂದು ಕಚ್ಚಾ ಸ್ಕೆಚ್ ಮಾಡುತ್ತಾರೆ. ಕಚ್ಚಾ ಸ್ಕೆಚ್ ಮಾಡಿ ಅದರ ಮೇಲೆ ಎರಡು ಎಕರೆಯೋ ಎಷ್ಟೋ ಎಂದು ಲ್ಯಾಂಡ್ ಗ್ರಾಟ್ ಮಾಡುತ್ತಾರೆ. ಮತ್ತೆ ಮುಂದೆ ಪೋಡಿಯಾದ ಮೇಲೆ ಒಂದು ಎಕರೆ ಎಂದು ಬರಬಹುದು, ಒಂದೂಪರೆ ಎಕರೆ ಎಂದು ಬರಬಹುದು ಅಥವಾ ಒಂದೂ ಮೂಕ್ಕಾಲು ಎಕರೆಯಾದರೂ ಬರಬಹುದು. ಮಾನ್ಯ ಸದಸ್ಯರು ಈಗ ತತಕ್ಷಣ ಎತ್ತಿದರೆ ಉಪ ಮುಖ್ಯಮಂತ್ರಿಗಳು ರೆವಿನ್ಯೂ ಬಗ್ಗೆ ಏನು ಹೇಳಲಿಕ್ಕೆ ಸಾಧ್ಯವಾಗುತ್ತದೆ, ಅಥವಾ ನಾನಾದರೂ ಏನು ಹೇಳಲಿಕ್ಕೆ ಸಾಧ್ಯವಾಗುತ್ತದೆ. ಸ್ವಲ್ಪ ಸಮಯ ಕೊಟ್ಟರೆ ರೆವಿನ್ಯೂ ಮಂತ್ರಿಗಳು ಬಂದಮೇಲೆ ಏನಾದರು ಹೇಳಬಹುದು.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ನಾನು ಸನ್ಮಾನ್ಯ ಸಚಿವರುಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ತಾವು ಹೇಳಿರುವ ಮಾತು ಸರಿ ಆದರೆ ನೀವು ಹೇಳಿದಂತೆ ರೆವಿನ್ಯೂ ಅಧಿಕಾರಿಗಳು ನಡೆದುಕೊಳ್ಳಬೇಕಲ್ಲ. ನಾನು ಸನ್ಮಾನ್ಯ ಧರ್ಮಸಿಂಗ್‌ರವರೇ ಬರೆದಿರತಕ್ಕಂಥ ಪತ್ರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಕೆ. ಹೆಚ್ ರಂಗನಾಥ್.—ಇದೆಲ್ಲ ತಪ್ಪಾಗುತ್ತದೆಂದು ಹೇಳಿ ಆಯಾಯಾ ಕ್ಷೇತ್ರದ ವಿಧಾನ ಸಭಾಸದಸ್ಯರ ಅಧ್ಯಕ್ಷತೆಯಲ್ಲಿ ಕಮಿಟಿ ಮಾಡಲಾಗಿದೆ. ಇದು ತಡವಾಗುತ್ತದೆ, ಜಾಗ್ರತೆಯಾಗಬೇಕೆಂದು ಮಾಡಿ ಇವತ್ತು ಆ ಹೊಣೆಯನ್ನು ನಮಗೆ ವಹಿಸಿದ್ದಾರೆ. ನಾವು ಹೊಣೆಯನ್ನು ನಿರ್ವಹಣೆ ಮಾಡದೆ, ಇವತ್ತು ಸರ್ಕಾರಕ್ಕೆ ಹೇಳಲಿಕ್ಕೆ ನಾವೇ ಹೊರಟಿದ್ದೇವೆ, ಹಾಗಾಗಿದೆ ಲೆಕ್ಕಾಚಾರ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸ್ವಾಮಿ, ನಾನು ಕೇವಲ ಉತ್ತರವನ್ನು ಕೇಳುವುದಕ್ಕೆ ನಿಂತಿಲ್ಲ. ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ತಾವು ನಮ್ಮ ರಕ್ಷಣೆಗೆ ಬರಬೇಕು. ನಮ್ಮ ಗಮನಕ್ಕೆ ಬಂದಿರುವುದನ್ನು ನಾನು ಹೇಳುತ್ತಿದ್ದೇನೆ. ಸ್ವತಃ ಮಾನ್ಯ ಧರ್ಮಸಿಂಗ್‌ರವರು ಬರೆದಿರತಕ್ಕಂಥ ಪತ್ರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಜುಲೈ ೧೯೯೩ ರಲ್ಲಿ ಇದ್ದ ಪರಿಸ್ಥಿತಿ ಪ್ರಕಾರ ಸಕ್ರಮ ಗೊಳಿಸಲು ಆಪೇಕ್ಷಿಸಿದಂತೆ ೧೦ ಲಕ್ಷ ೮೬ ಸಾವಿರ ಅರ್ಜಿಗಳಲ್ಲಿ ಕೇವಲ ೨ ಲಕ್ಷದ ೪೪ ಸಾವಿರ ಅರ್ಜಿಗಳು ಮಾತ್ರ ವಿಲೇವಾರಿಯಾಗಿವೆ. ಅಕ್ರಮ ಸಾಗುವಳಿಯಲ್ಲಿದ್ದ ೨೫ ಲಕ್ಷ ೮೫ ಸಾವಿರ ಎಕರೆ ವಿಸ್ತೀರ್ಣದಲ್ಲಿ ಕೇವಲ ೫ ಲಕ್ಷ ೬೭ ಸಾವಿರ ಎಕರೆಗಳಷ್ಟು ಮಾತ್ರ ಸಕ್ರಮಗೊಳಿಸಲಾಯಿತು. ಅಂದರೆ ಒಟ್ಟು ಆಗಬೇಕಾಗಿದ್ದ ಕೆಲಸದಲ್ಲಿ ಕೇವಲ ೨೨.೫% ಯಷ್ಟು ಮಾತ್ರ ಪ್ರಗತಿಯನ್ನು ಸಾಧಿಸಲಾಯಿತು. ಸಚಿವ ಸಂಪುಟ ಈ ವಿಷಯವನ್ನು ವಿಮರ್ಶಿಸಿ ಈ ಕೆಲಸ ವಿಳಂಬವಿಲ್ಲದೆ ತುರ್ತಾಗಿ ತೀರ್ಮಾನವಾಗುವಂತೆ ಈ ಕೆಳಕಂಡ ನಿರ್ಧಾರಗಳನ್ನು ತೆಗೆದುಕೊಂಡು ಅದರಂತೆ ಜಿಲ್ಲಾಧಿಕಾರಿಗಳಿಗೆ ಆದೇಶವನ್ನು ಕಳುಹಿಸಲಾಗಿದೆ. ಅದರಲ್ಲಿ ಪ್ರತಿಯೊಂದು ತಾಲ್ಲೂಕಿನಲ್ಲಿ ಪಾರಕ್ಕೊಮ್ಮೆ ಮೀಟಿಂಗ್‌ನ್ನು ಕರೆಯಬೇಕು, ೨೫ ಅರ್ಜಿಗಳು ವಿಲೇವಾರಿಯಾಗಬೇಕು, ತಿಂಗಳಿಗೆ ೧೦೦ ಅರ್ಜಿಗಳು ವಿಲೇವಾರಿಯಾಗಬೇಕೆಂದು ಹೇಳಿದ್ದಾರೆ. ೨೫ ಅರ್ಜಿಗಳು ವಿಲೇವಾರಿಯಾಗಬೇಕೆಂದು ನಾನು ಅಲ್ಲಿ ಕುಳಿತುಕೊಂಡರೆ ಸರ್ವೆಮಾಡಿ ರೆಕಾರ್ಡ್‌ನ್ನು ತಂದುಕೊಡುವಂಥ ವ್ಯವಸ್ಥೆಗೆ ಸರ್ವೇಯರ್ಸ್ ಬೇಕಲ್ಲ. ಆ ಸರ್ವೇಯರ್‌ಗಳ ವ್ಯವಸ್ಥೆ ಮಾಡತಕ್ಕಂಥದ್ದು ಅಗತ್ಯವಿರತಕ್ಕಂಥಪರವನ್ನು ನೇಮಕ ಮಾಡತಕ್ಕಂಥದ್ದು ಸರ್ಕಾರದ ಕರ್ತವ್ಯತಾನೆ. ೪-೫ ಲಕ್ಷ ಜನರಿಗೆ ಜಮೀನನ್ನು ಸಾಗುವಳಿಗೆ ಕೊಡಬೇಕಾದರೆ ಈ ದಿಕ್ಕಿನಲ್ಲಿ ಕಳೆದ ೮-೧೦ ವರ್ಷ

ಗಳಿಂದಲೂ ಸತತವಾಗಿ ಬಗರ್‌ಹುಕುಂ ಸಾಗುವಳಿ ಮಾಡುತ್ತಿದ್ದರೆ, ಅವರಿಗೆ ಯಾವುದೇ ಸವಲತ್ತುಗಳು ಸಿಕ್ಕಿಲ್ಲ, ಸಾಗುವಳಿ ಚೀಟಿ ಸಿಕ್ಕಿಲ್ಲ. ರೈತ ಕಣ್ಣೀರಿನಲ್ಲಿ ಕೈತೊಳೆಯುತ್ತಿದ್ದಾನೆ ಎನ್ನುವ ಮಾತನ್ನು ನಾವು ಹೇಳಿದರೆ ರೆವಿನ್ಯೂ ಇಲಾಖೆಯ ಕಾನೂನನ್ನು ತಾವು ಹೇಳಿದರೆ ನಾವೇನೂ ಮಾಡಲಿಕ್ಕೆ ಆಗುವುದಿಲ್ಲ. ಮಂತ್ರಿಗಳೇ ಈ ಸುತ್ತೋಲೆಯನ್ನು ಕಳುಹಿಸಿದ್ದಾರೆ, ಇದನ್ನು ಜಾರಿ ಮಾಡಲಿಕ್ಕೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಕೆ. ಹೆಚ್. ರಂಗನಾಥ್.—ಸರ್ಕಾರ ಇರುವುದು ಕಾನೂನು ಪ್ರಕಾರ ಕೆಲಸ ಮಾಡಲಿಕ್ಕೆ. ಸರ್ಕಾರ ಅಂಗಡಿಯಲ್ಲಿ ವ್ಯಾಪಾರ ಮಾಡಿದಂತೆ ಮಾಡಲಿಕ್ಕೆ ಸಾಧ್ಯವಾಗುತ್ತದೆಯೇ?

ಶ್ರೀ ಬಿ. ಎಸ್. ಯಡಿಯೂರಪ್ಪ.—ಅಂಗಡಿ ನಡೆಸುವಂತೆ ಅಂದರೆ ಯಾರಿಗೆ ಬೇಕಾದರೂ ಪ್ರಾಮಾಣಿಕ ಪತ್ರವನ್ನು ಕೊಡಿ ಎಂದು ನಾನು ಹೇಳಿದೆನೆ. ಕಾನೂನು ಚೌಕಟ್ಟಿನಲ್ಲಿ ನಿಮ್ಮ ಸರ್ಕಾರ ಕೆಲಸ ಮಾಡಿಲ್ಲ, ರೆವಿನ್ಯೂ ಅಧಿಕಾರಿಗಳು ಮಾಡಿಲ್ಲ. ಸರ್ವೇಯರ್ಸ್ ಅಲ್ಲಿಲ್ಲ, ಇದೇ ರೀತಿಯಲ್ಲಿ ಕೆಲಸ ಮಾಡಿದರೆ ಈಗ ಬಂದಿರತಕ್ಕಂಥ ಅರ್ಜಿದಾರರಿಗೆ ಇನ್ನು ೫ ವರ್ಷಗಳಾದರೂ ಸಾಗುವಳಿ ಚೀಟಿಯನ್ನು ಕೊಡುವುದಕ್ಕಾಗುವುದಿಲ್ಲ.

ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ಸದಸ್ಯರಿಗೆ ನಾನು ಏನು ಹೇಳುತ್ತಿದ್ದೇನೆಂದರೆ ಇದು ಕಾರಣಾಂತರದಿಂದ ಡಿಲೇಯಾಗಿದೆ. ಅದಕ್ಕೋಸ್ಕರ ಆಯಾ ಕ್ಷೇತ್ರದ ಸದಸ್ಯರಿಗೆ ಹೊಣೆಯನ್ನು ಹೊರಿಸಿದ್ದಾರೆ, ಅವರು ಕೆಲಸ ಮಾಡುತ್ತಿದ್ದಾರೆ. ಅದನ್ನು ನಿರ್ವಹಣೆ ಮಾಡುವಾಗ ತೊಂದರೆಗಳು ಬರಬಹುದು. ಆ ಕಮಿಟಿಯ ಸದಸ್ಯರನ್ನು ನೇಮಕ ಮಾಡುವುದರಲ್ಲಿ ತಡವಾಗಿದೆ. ಮತ್ತೆ ಬೇರೆ ಬೇರೆ ಕಾರಣಗಳಿಂದ ಕೂಡ ತಡೆ ಆಗಿರಬಹುದು. ಅದೆಲ್ಲ ಇದೆ. ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದಂತೆ ಕಾಲ ಕಳೆದಿದೆ, ತೊಂದರೆಯಾಗಿದೆ ಎಂದು ಹೇಳುವುದರಲ್ಲಿ ಅರ್ಥವಿದೆ. ಈಗ ಸದಸ್ಯರನ್ನು ನೇಮಕ ಮಾಡಿದ್ದಾರೆ, ಅಧ್ಯಕ್ಷರು ಎಂ. ಎಲ್. ಎ. ಗಳು ಇದ್ದಾರೆ, ತಕ್ಷಣವೇ ಮೇಲಿಂದಮೇಲೆ ವಿಸಿಟಿಂಗ್ ಕರೆದು ಮಾಡಿದರೆ ಅದು ಜಾಗ್ರತೆ ಆಗುತ್ತದೆ ಇಲ್ಲವಾದರೆ ಅದು ಆಗುವುದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ತಾವು ಲೇಟಾಗಿ ಬಂದಿರಿ. ಒಂದು, ಅಲ್ಲಿ ಸರ್ವೇಯರ್ಸ್ ಇಲ್ಲ ಎಂಬುದು ಒಂದು ಎರಡನೆಯದು ಇನ್ನೂ ೫ ಲಕ್ಷ ಜನ ಅರ್ಜಿ ಹಾಕಬೇಕಾಗಿದೆ. ಪ್ರಿಸ್ಕ್ರೈಬ್ಡ್ ಫಾರಂನಲ್ಲಿ ಅರ್ಜಿ ಹಾಕಿಲ್ಲ ಅವರು. ಅವರಿಗೆ ಟೈಂ ಎಕ್ಸ್‌ಟೆಂಡ್ ಮಾಡಬೇಕಾಗಿದೆ ಎಂದು ಮುಖ್ಯ ಮಂತ್ರಿಗಳೇ ಒಪ್ಪಿಕೊಂಡಿದ್ದಾರೆ. ಅದನ್ನು ಮಾಡುತ್ತೀರಾ ?

ಶ್ರೀ ಕೆ. ಹೆಚ್. ರಂಗನಾಥ್.—ಅದು ಒಪ್ಪುವುದಕ್ಕಾಗುವುದಿಲ್ಲ. ೧೯೭೮ನೇ ಇಸವಿಯಲ್ಲಿ ಕೂಡ ಒಂದು ಗೌರ್ನಮೆಂಟ್ ಆರ್ಡರ್ ಆಗಿದೆ. ಯಾರು ಎನ್‌ಕ್ರೋಚ್‌ಮೆಂಟ್ ಮಾಡಿದ್ದರು ಅವರಿಗೆ ಅಪತ್ರಿನ ದಿವಸ ಖಾಯಂ ಮಾಡಬೇಕು ಎಂದು ಇದೆ. ಅದರ ನಂತರ ಕೆಲವು ಗೌರ್ನಮೆಂಟ್ ಆರ್ಡರ್ಸ್ ಮಾಡಿದ್ದಾರೆ. ನಾವು ದಿನೇ ದಿನೇ ಪ್ರತಿ ತಿಂಗಳೂ ಎಕ್ಸ್‌ಟೆಂಡ್ ಮಾಡುತ್ತಾ ಹೋದರೆ ಏನಾಗುತ್ತದೆ?

ಶ್ರೀ ಕೆ. ಎಸ್. ಈಶ್ವರಪ್ಪ.—ಮುಖ್ಯಮಂತ್ರಿಗಳು ಮಾಡುತ್ತೇವೆಂದು ಒಪ್ಪಿಕೊಂಡಿದ್ದಾರೆ. ಈ ಸಭೆಯಲ್ಲಿಯೇ ಒಪ್ಪಿಕೊಂಡಿದ್ದಾರೆ.

ಶ್ರೀ ಕೆ. ಹೆಚ್. ರಂಗನಾಥ್.—ಅದಿರಲಿ. ಸರ್ಕಾರ ಒಪ್ಪಿಕೊಂಡಿರುವುದು ಬೇರೆ. ನಾವು ಸಾರ್ವಜನಿಕರಿಗೆ ಜವಾಬ್ದಾರಿಯಾದ ಸದಸ್ಯರಾಗಿ ಮಾತನಾಡತಕ್ಕ ದೃಷ್ಟಿಯಿಂದ ಹೇಳುತ್ತಿದ್ದೇನೆ. ಹಿಂದೆ ಸರ್ಕಾರ ಇದ್ದಾಗ ಒತ್ತುವರಿ ಮಾಡಿದವರಿಗೆ ಟಿ. ಟಿ. ಹಾಕಿ ಖಾಯಂ ಮಾಡಿ ಎಂದು ಹೇಳಿದರು. ಟಿ. ಟಿ. ಅಂದರೆ ತಕರಾರು ತಃಬ್ತೆ ಎಂದು ಹೇಳುತ್ತಾರೆ. ಒತ್ತುವರಿ ಮಾಡಿದ್ದಕ್ಕೆ ಟಿ. ಟಿ. ಹಾಕಿ ಖಾಯಂ ಮಾಡಬೇಕು ಎಂದು. ಯಾರೇ ಒಬ್ಬ ವ್ಯಕ್ತಿ ಸರ್ಕಾರಿ ಭೂಮಿಯನ್ನು ಒತ್ತುವರಿ ಮಾಡಬಾರದು, ಸಾಗು ಮಾಡಬಾರದು ಎಂದು ಕಾನೂನು ಇದೆ. ಮಾಡಿದರೆ ಮಾಡಿದ ತಪ್ಪಿಗೆ ಟಿ. ಟಿ. ಹಾಕಬೇಕು ಎಂದು ಇದೆ. ಕಾನೂನಿಗೆ ಎವಿಕ್ಷನ್ ಮಾಡಬೇಕು ಎಂದು ಇತ್ತು. ಆದರೆ ಸರ್ಕಾರ ಈಗ ಏನು ಮಾಡಿದೆ? ಎವಿಕ್ಷನ ಮಾಡುವ ಬದಲು ಖಾಯಂ ಮಾಡಬೇಕು. ಎಂದು ಆಗಿದೆ. ಹಿಂದಿನ ಸರ್ಕಾರ ದುಡ್ಡು ಕಟ್ಟಿಬಿಡಿ ಖಾಯಂ ಮಾಡುತ್ತೇವೆ ಎಂದು ಮಾಡಿತ್ತು ಹಾಗಾಗಿ ಇವತ್ತಿನ ದಿವಸ ೧೦ ಲಕ್ಷಕ್ಕೂ ಹೆಚ್ಚಿನ ಅರ್ಜಿಗಳು ಬಂದಿವೆ ಇವತ್ತು ಏನಾಗಿದೆ ? ಒಂದು ಕಾಲವನ್ನು ಬಗದಿ ಮಾಡಬೇಕಾಗುತ್ತದೆ. ಮಾನ್ಯ ಸದಸ್ಯರು ಮೇಲಾಡು ಭಾಗದಿಂದ ಬರುತ್ತಾರೆ. ಸಿಲ್ವರ್ ಡಿ ಲ್ಯಾಂಡ್ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದರು. ಆ ವಿಷಯ ಸ್ವಲ್ಪ ನನಗೆ ಗೊತ್ತು. ಇವತ್ತು ಒಂದು ತಾರೀಖು ಕೊಟ್ಟು ಮಾಡಿದರೆ ಆ ತಾರೀಖಿಗೇ ಕೊನೆಯಾಗುತ್ತದೆ ಎಂದು ಏನು

ಗ್ಯಾರಂಟಿ ? ಹೇಗೊ ಸರ್ಕಾರ ಕೊಡುತ್ತದೆ ಎಂದು ಮತ್ತೆ ಮತ್ತೆ ಒತ್ತುವರಿ ಮಾಡುತ್ತಾ, ಹೋಗುತ್ತಾರೆ ಮತ್ತೆ ನಾವು ಡೇಟ್ ಕೊಡಬೇಕಾಗುತ್ತದೆ. ತಾವು ಯೋಚನೆ ಮಾಡಿ. ಅವರು ಕಷ್ಟದಿಂದ ಕೇಳುತ್ತಾರೆ. ಆದರೆ ಯಾವುದಾದರೂ ಒಂದು ಡೇಟ್ ಹಾಕಿಕೊಳ್ಳಬೇಕಲ್ಲ ? ಇನ್ನೂ ನಾವು ಸಮಯ ಕೊಡಬೇಕು ಎಂದು ಹೇಳಿದರೆ ...

ಶ್ರಿ ಬಿ. ಎಸ್. ಯಡಿಯೂರಪ್ಪ:—ಒಂದು ನಿಮಿಷ ಕೇಳಿ. ನೀವು ಇದರ ಸಮಸ್ಯೆಯನ್ನು ಅರ್ಥ ಮಾಡಿಕೊಳ್ಳಲಿಲ್ಲ, ತಾವು ಹೇಳುವುದು ನಿಜ ಇದೆ. ಕಳೆದ ೧೫-೨೦ ವರ್ಷಗಳಿಂದ ತಹಸೀಲ್ದಾರರಿಗೆ ಒಂದು ಅರ್ಜಿ ಕೊಟ್ಟಿದ್ದಾರೆ. ಆದರೆ ಯಾವುದೋ ನಿರ್ದಿಷ್ಟ ತಾರೀಖಿನಲ್ಲಿ ಪ್ರಿಸ್ಕ್ರೈಬ್ಡ್ ಫಾರಮ್‌ನಲ್ಲಿ ಅರ್ಜಿಗಳನ್ನು ಕೊಟ್ಟಿಲ್ಲ ಎಂದು ಅವರಿಗೆ ಎಲಿಜಿಬಲಿಟಿ ಬರುತ್ತಿಲ್ಲ. ಆದನ್ನು ಸರಿ ಮಾಡುತ್ತಿಲ್ಲ. ಸಾಗುವಳಿ ಚೀಟಿ ಅವರಿಗೆ ಕೊಟ್ಟಿಲ್ಲ. ಅಂಥ ಕೇಸುಸ್‌ನಲ್ಲಿ ಯಾರು ಈಗಾಗಲೇ ಬಗರ್‌ಹುಕುಂ ಸಾಗುವಳಿ ಮಾಡುತ್ತಿದ್ದಾರೆ ಅವರಿಂದ ಅರ್ಜಿ ಕೊಡುವುದಕ್ಕೆ ಕಾಲಾವಕಾಶವನ್ನು ವಿಸ್ತರಣೆ ಮಾಡುತ್ತೇವೆಂದು ಮುಖ್ಯ ಮಂತ್ರಿಗಳು ಒಪ್ಪಿ ಕೊಂಡಿದ್ದಾರೆ. ಮತ್ತೆ ಇನ್ನೊಂದು ವಿಚಾರವೆಂದರೆ, ಅರಣ್ಯ ಇಲಾಖೆಗೆ ಸೇರಿದ ಲಕ್ಷಾಂತರ ಎಕರೆ ಜಮೀನಿನಲ್ಲಿ ಬಗರ್‌ಹುಕುಂ ಸಾಗುವಳಿಯನ್ನು ಕಳೆದ ೨೫ ವರ್ಷಗಳಿಂದ ಮಾಡುತ್ತಿದ್ದಾರೆ. ನೀವೇ ಇಲ್ಲಿ ಕೊಟ್ಟಂಥ ವರದಿ ಪ್ರಕಾರ ೭೫-೮೦ ಪರ್ಸೆಂಟ್ ಎಸ್‌ಸಿ ಎಸ್‌ಟಿ ಜನಾಂಗದವರಿದ್ದಾರೆ.

ಶ್ರೀ ಕೆ. ಹೆಚ್. ರಂಗನಾಥ್.—ಶಿವಮೊಗ್ಗ ಜಿಲ್ಲೆಯ ರಿಸರ್ವ್ ಫಾರೆಸ್ಟ್‌ನಲ್ಲಿ ಒತ್ತುವರಿ ಮಾಡಿ ಮಾಡುತ್ತಿದ್ದಾರೆ. ಅದನ್ನು ಕೊಡುವುದಕ್ಕಾಗುತ್ತದೆಯೇ ? ಯಾವ ವರ್ಷ ಆದರೂ ಆಗಲಿ, ರಿಸರ್ವ್ ಫಾರೆಸ್ಟ್ ಸೆಂಟರ್‌ನಲ್ಲಿ ಒತ್ತುವರಿ ಮಾಡಿದ್ದಾರೆ. ಅದನ್ನು ಕೊಡುವುದಕ್ಕಾಗುತ್ತದೆಯೇ ?

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ಇದು ಪ್ರಮುಖವಾದುದು.

ಅಧ್ಯಕ್ಷರು.—ಅವರು ಉತ್ತರ ಹೇಳಲಿ.

ಶ್ರೀ ವಾಟಾಳ್ ನಾಗರಾಜ್.—ನಾನೇನು ಹೇಳುತ್ತೇನೆಂದರೆ ಈ ಪ್ರಶ್ನೆಯಲ್ಲಿ ಮಾನ್ಯ ಸಚಿವರಾದ ಶ್ರೀ ಕೆ. ಹೆಚ್. ರಂಗನಾಥ್ ಅವರು ನಾವು ಕೇಳಿರುವ ಪ್ರಶ್ನೆ ಯಾವುದು ಎಂಬುದನ್ನು ಅರಿಸಬೇಕು. ನೀವು ಶಾಸಕರ ಅಧ್ಯಕ್ಷತೆಯಲ್ಲಿ ಸಮಿತಿ ಮಾಡಿದ್ದೀರಿ. ಅದನ್ನು ನಾವು ಒಪ್ಪಿಕೊಳ್ಳುತ್ತೇವೆ. ಈ ಸಮಿತಿ ಮಾಡಬೇಕಾದಂಥ ಕಾರ್ಯಕಲಾಪ ಇದೆಯಲ್ಲ ಅದಕ್ಕೆ ಅಡಚಣೆ ಬಂದಿರುವುದು ಏನು ಎಂಬುದನ್ನು ತಮಗೆ ನಾವು ಹೇಳುತ್ತಿದ್ದೇವೆ. ಏನು ಅಡಚಣೆ ಬಂದರೆ ನಾವು ಯಾವುದಾದರೂ ಒಂದು ಆಕ್ರಮವನ್ನು ಸಕ್ರಮಗೊಳಿಸಬೇಕಾದರೆ ಮುಂಚಿತವಾಗಿ, ತಾವು ಹೇಳಿದಿರಿ ರೆವಿನ್ಯೂ ಇನ್‌ಸ್ಪೆಕ್ಟರ್ ಇದೆಲ್ಲಾ ಮಾಡಬಹುದು ಎಂದು. ಆದರೆ ಇದನ್ನೆಲ್ಲಾ ಸರ್ವೇಯರ್ ಮಾಡಬೇಕು ಎಂಬ ಆದೇಶ ಇದೆ. ಇದರ ಪ್ರಕಾರ ಪ್ರತಿ...

ಶ್ರೀ ಕೆ. ಹೆಚ್. ರಂಗನಾಥ್.—ಇದು ನನಗೆ ಗೊತ್ತಿರಲಿಲ್ಲ. ನಾನು ಹಳೆಯ ಆರ್ಡರ್ ರೆವಿನ್ಯೂ ಪ್ರಕಾರ ಹೇಳಿದೆ. ಹಾಗಿದ್ದರೆ ನಾವೆಲ್ಲಾ ಸದಸ್ಯರು ಆದರ ಅಧ್ಯಕ್ಷರಾಗಿದ್ದೇವೆ. ಸರ್ಕಾರಕ್ಕೆ ಬಹಳ ದಿವಸದ ಕೆಳಗೆ ಬರೆದು ಅದನ್ನು ಸರಿ ಮಾಡಿಕೊಳ್ಳಬೇಕಾಗಿತ್ತು.

ಶ್ರೀ ವಾಟಾಳ್ ನಾಗರಾಜ್.—ಸರ್ವೇಯರ್‌ಗಳ ಕೊರತೆ ಎಲ್ಲ ತಾಲ್ಲೂಕಿನಲ್ಲೂ ಇದೆ. ಇದರ ಜೊತೆಗೆ ಅರಣ್ಯ ಪ್ರದೇಶದಲ್ಲಿ ಒತ್ತುವರಿ ಮಾಡಿಕೊಂಡು ಯಾರು ಯಾರು ಸಾಗುವಳಿ ಮಾಡುತ್ತಾ ಇದ್ದಾರೆ ಅವರಿಗೆ ಸಕ್ರಮ ಮಾಡುತ್ತೇವೆ ಎಂಬ ಆದೇಶ ಸರ್ಕಾರದಿಂದ ಆಗಿಲ್ಲ. ಇದರ ಜೊತೆಗೆ ಸೇಂದಿ ವನ ಬೇರೆ ಸೇರಿದೆ. ಇದರ ಬಗ್ಗೆ ಸರ್ಕಾರ ಸ್ಪಷ್ಟೀಕರಣ ಕೊಟ್ಟಿಲ್ಲ. ಈಗ ಯಾವುದೇ ಸಭೆ ಸೇರಿತು ಎಂದರೆ ನಮ್ಮ ಸಭೆಯಲ್ಲಿ ಬರತಕ್ಕದ್ದು ೧೦೦ಕ್ಕೆ ೯೦ ಭಾಗ ಸೇಂದಿ ವನದ್ದು ಬರುತ್ತದೆ. ನಾವೇನು ಮಾಡಬೇಕು ? ಸಭೆ ಸೇರಿ ತಕ್ಷಣ ಅಂತಹ ಅರ್ಜಿಗಳನ್ನು ವಜಾ ಮಾಡಬೇಕು, ಅಷ್ಟೇ ಉಳಿದಿರತಕ್ಕದ್ದು. ನಾವೇನು ಮಾಡಿದ್ದೇವೆ ? ಜೀವ ಇರಲಿ. ವಜಾ ಮಾಡುವುದು ಬೇಡ, ಸರ್ಕಾರದಿಂದ ಏನಾದರೂ ಒಂದು ಆದೇಶ ಬರಬಹುದು, ಆದೇಶಕ್ಕೋಸ್ಕರ ಕಾಯೋಣ ಎಂದು ಸುಮ್ಮನಿದ್ದೇವೆ. ವಜಾ ಮಾಡುವುದು ಐದು ನಿಮಿಷ. ಒಂದು ಸಭೆ ಸೇರಿ ಬಂದಿರತಕ್ಕ ೧೫೦೦ ಅರ್ಜಿಗಳೂ ಅರಣ್ಯ ಇಲಾಖೆಗೆ ಸೇರಿದ್ದು. ಇದನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಇದು ಸೇಂದಿ ವನಕ್ಕೆ ಸೇರಿದ್ದು ಎಂದು ತಳ್ಳಿಹಾಕಬಹುದು. ಆದರೆ ನಾನೇನು ಸರ್ಕಾರಕ್ಕೆ ಹೇಳುತ್ತಿದ್ದೇನೆ ಅಂದರೆ ದಯವಿಟ್ಟು ಇದನ್ನು ಪರಿಶೀಲನೆ ಮಾಡಿ ಮತ್ತೊಂದು ಆದೇಶ ಹೊರಡಿಸಿ. ಸೇಂದಿವನ ಅರಣ್ಯ ಇಲಾಖೆಗೆ ಸೇರಿದ್ದೇ ಅಥವಾ ಅಲ್ಲವೇ ಏನು ಎಂಬುದನ್ನು ಸ್ಪಷ್ಟಪಡಿಸಬೇಕು.

ಮತ್ತೊಂದು ತಮ್ಮಲ್ಲಿ ಏನು ಹೇಳುತ್ತಿದ್ದೇನೆಂದರೆ, ಈ ಸಮಿತಿಗಳ ಅವಧಿ ಈ ತಿಂಗಳಲ್ಲಿ ಮುಗಿಯುತಕ್ಕದ್ದು ಇದೆ. ಒಂದೆರಡು ತಿಂಗಳು ಮುಂದುವರಿಸುವುದಕ್ಕೆ ಅವಕಾಶ ಮಾಡಿ ಕೊಡಿ. ಪ್ರಮುಖವಾಗಿ ಹೇಳುವುದಾದರೆ ಇಬ್ಬರು ಹಿರಿಯ ಸಚಿವರು ಇಲ್ಲಿ ಕುಳಿತಿದ್ದಾರೆ. ಅವರು ಸ್ವಲ್ಪ ವಿಚಾರವನ್ನು ಅರ್ಥ ಮಾಡಿ ಕೊಂಡಿಲ್ಲವೆಂದು ನಾನು ಹೇಳಿದಿದ್ದರೂ ಇವತ್ತು ಸಂಬಂಧಪಟ್ಟ ಸಚಿವರನ್ನು ಸಂಜೆಯೊಳಗೆ ಕರೆಸಿ ಅವರಿಂದ ಅಮೂಲಾಗ್ರವಾದ ಉತ್ತರವನ್ನು ಕೊಡಿಸಿದರೆ ಅದು ಸಮಾಧಾನಕರವಾದ ಉತ್ತರ ವಾಗುತ್ತದೆಂದು ನಾನು ಅಂದುಕೊಂಡಿದ್ದೇನೆ. ದಯವಿಟ್ಟು ಹಾಗೆ ಮಾಡಿದರೆ ಒಳ್ಳೆಯದೆಂದು ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದು ಇಷ್ಟೆ, ಯಡಿಯೂರಪ್ಪನವರೇ, ನೀವು ಮಾತನಾಡುವುದು ಸರಿಯಲ್ಲವೆಂದು ಸರ್ಕಾರಕ್ಕೆ ಅನಿಸಿದರೆ ನಾನು ಮಾತನಾಡುವುದಿಲ್ಲ.

ಶ್ರೀ ಎಸ್. ಎಂ. ಕೃಷ್ಣ.—ರೆವಿನ್ಯೂ ಮಂತ್ರಿಗಳು ಬರುತ್ತಾರೆ, ಅವರೇ ಉತ್ತರ ಹೇಳುತ್ತಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೆ, ನಾನು ಹೇಳುತ್ತಿರುವುದು ಅತ್ಯಂತ ಪ್ರಮುಖವಾದ ವಿಷಯ. ತಾವು ನಮ್ಮ ರಕ್ಷಣೆಗೆ ಬರಬೇಕಾಗುತ್ತದೆ. ಇದು ನಾಲ್ಕೈದು ಲಕ್ಷ ಜನಗಳಿಗೆ ಸಂಬಂಧಪಟ್ಟ ವಿಷಯ. ನಮ್ಮ ರೆವಿನ್ಯೂ ಮಂತ್ರಿಗಳು ಎಲ್ಲಿ ಹೋಗುತ್ತಾರೆ? ನಾನು ನಿಮ್ಮ ಕೊಠಡಿಗೆ ಬಂದು ಮಾತನಾಡಿದ್ದೇನೆ. ಈ ವಿಷಯವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುತ್ತೇನೆಂದು, ನಮ್ಮ ಈಶ್ವರಪ್ಪನವರು ಬಂದು ತಮಗೆ ಹೇಳಿದ್ದಾರೆ. ಆದ್ದರಿಂದ ಅವರು ಇಲ್ಲಿ ಬಂದು ಕುಳಿತುಕೊಳ್ಳಬೇಕಾಗುತ್ತದೆ.

ಅಧ್ಯಕ್ಷರು.—ಅವರು ಬಂದು ಉತ್ತರ ಕೊಡುತ್ತಾರೆಂದು ನಾನು ಹೇಳಿದ್ದೇನೆ.

ಶ್ರೀ ಎಸ್. ಎಂ. ಕೃಷ್ಣ.—ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ನಿಮಗೆ ಮೊದಲೇ ನೋಟೀಸ್ ಕಳುಹಿಸಿದ್ದಾರಾ ?

ಶ್ರೀ ಬಿ. ಎಸ್. ಯಡಿಯೂರಪ್ಪ.—ಅಧ್ಯಕ್ಷರಿಗೆ ಹೇಳಿದ್ದೇವೆ.

ಶ್ರೀ ಎಸ್. ಎಂ. ಕೃಷ್ಣ.—ನಿಮ್ಮ ಆಫೀಸಿನಿಂದ ನಮಗೆ ಏನಾದರೂ ನೋಟೀಸ್ ಬಂದಿದೆಯೇ ? ಅವರು ಬೆಳಿಗ್ಗೆ ೧೦-೩೦ಕ್ಕೆ ನಿಮ್ಮ ಕಛೇರಿಗೆ ಬರುತ್ತಾರೆ, ಸ್ವಾಮಿ ನಾನು ಇದನ್ನು ಈಗ ಎತ್ತುತ್ತೇನೆಂದು ಹೇಳುತ್ತಾರೆ. ರೆವಿನ್ಯೂ ಮಂತ್ರಿಗಳಿಗೆ ಇದೆಲ್ಲಾ ಕನಸು ಬೀಳಬೇಕಾಗಿತ್ತಾ ? ಯಡಿಯೂರಪ್ಪನವರು ಇದನ್ನು ಎತ್ತುತ್ತಾರೆಂದು ಅವರು ಇಲ್ಲಿ ಬಂದು ಕೂರಬೇಕಾಗಿತ್ತಾ ? ಏನು ಬೇಜವಾಬ್ದಾರಿ ಮಾತು ?

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ಇದು ಬೇಜವಾಬ್ದಾರಿ ಮಾತು.

(ಬಿಜೆಪಿ ಸದಸ್ಯರು ತಮ್ಮ ಪೀಠಗಳಿಂದ ಎದ್ದು ಮಾತನಾಡುತ್ತಾ ಸದನದ ಬಾವಿಯೊಳಗೆ ಬಂದರು)

ಶ್ರೀ ಎಸ್. ಎಂ. ಕೃಷ್ಣ.—ಅವರು ಹೊರಗಡೆ ಹೋಗಬೇಕಾಗಿದೆ. ಅವರು ಶವ ಸಂಸ್ಕಾರ ಮಾಡುವುದರಲ್ಲಿದ್ದಾರೆ.

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ. ತಾವು ಇದೇ ರೀತಿ ಮಾತನಾಡುತ್ತಿರೋ ಅಥವಾ ನಾನು ಎದ್ದುನಿಂತಾಗ ಸ್ವಲ್ಪ ಸುಮ್ಮನೆ ಇರುತ್ತೀರೋ ? ಈಗ ತಾವು ಬೆಳಿಗ್ಗೆ ೧೦-೩೦ ಗಂಟೆಗೆ ನನ್ನ ಕೊಠಡಿಗೆ ಬಂದು ಬಹಳ ಮಹತ್ವದ ವಿಷಯವಿದೆ, ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಲಿಕ್ಕೆ ಅವಕಾಶ ಮಾಡಿಕೊಡಿಯೆಂದು ನನ್ನಲ್ಲಿ ಕೇಳಿಕೊಂಡಿದ್ದೀರಿ ನಾನು ಸರಿಯೆಂದು ಅವಕಾಶ ಮಾಡಿಕೊಟ್ಟಿದ್ದೇನೆ. ಸರ್ಕಾರ ಇದೆ, ಅದರ ಬಗ್ಗೆ ಹೇಳಿಕೆ ಕೊಡಲಿ. ಅವರೇ ಬೇಕು, ಇವರೇ ಬೇಕೆಂದರೆ ಆಗುವುದಿಲ್ಲ. ಸರ್ಕಾರ ಇದೆ, ಅದಕ್ಕೆ ಜವಾಬ್ದಾರಿ ಇದೆ. ಅವರು ಮಾನ್ಯ ಕಂದಾಯ ಸಚಿವರನ್ನು ಕರೆಯಿಸಿ ಅವರಿಂದ ಉತ್ತರ ಕೊಡಿಸುತ್ತೇವೆಂದು ಹೇಳಿದ ನಂತರವೂ ತಾವು ಸಮಾಧಾನ ಪಟ್ಟುಕೊಳ್ಳುವುದಿಲ್ಲವೆಂದರೆ ನನಗೆ ಬೇಡ ಅನಿಸುತ್ತದೆ. ಮಾನ್ಯ ಯಡಿಯೂರಪ್ಪನವರೇ, ತಾವು ನಮ್ಮ ಪೀಠಕ್ಕೆ ಹೋಗಿ ಮಾತನಾಡಿ. ಇದು ಸರಿಯಲ್ಲ. ಸರ್ಕಾರದ್ದು ಜವಾಬ್ದಾರಿ ಇದೆ, ತಾವು ಹಠ ಹಿಡಿದು ಕೂಡುವುದು ಸರಿಯಲ್ಲ.

ಶ್ರೀ ಕರಿಯಣ್ಣ.—ಮಾನ್ಯ ಯಡಿಯೂರಪ್ಪನವರು ತಮ್ಮ ಸ್ಥಾನಕ್ಕೆ ಬಂದು ಮಾತನಾಡಲಿ.

ಅಧ್ಯಕ್ಷರು.—ತಾವು ಮಂತ್ರಿ ಈಶ್ವರಪ್ಪನವರು ನನ್ನ ಬಳಿ ಬಂದು ಕೇಳಿದ್ದಕ್ಕೆ ನಾನು ತಮಗೆ ಅವಕಾಶ ಮಾಡಿಕೊಟ್ಟಿದ್ದೇನೆ. ಆದರ ಬಗ್ಗೆ ಸರ್ಕಾರ ಹೇಳಿಕೆ ಕೊಡುತ್ತದೆ. ಅದನ್ನು ತಾವು ಕೇಳಿ ಕೊಳ್ಳಬೇಕಾಗುತ್ತದೆ.

ಶ್ರೀ ಪಾಟಾಳ್ ನಾಗರಾಜ್.—ಕಂದಾಯ ಸಚಿವರು ಸಾಯಂಕಾಲ ಬಂದು ಉತ್ತರ ಕೊಡುತ್ತಾರೆಂದು ಹೇಳಿದ್ದಾರೆ. ಹೀಗೆ ಹೇಳಿದರೂ ಇವರು ಈ ತರಹ ಮಾಡುವುದು ಸರಿಯಲ್ಲ.

(ಬಿಜೆಪಿ ಸದಸ್ಯರು ಸದನದ ಬಾವಿಯಿಂದಲೇ ಮಾತನಾಡುತ್ತಿದ್ದರು)

ಶ್ರೀ ಪಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೆ, ಇಲ್ಲಿ ನಾನು ರಾಜೀ ಮಾಡುತ್ತಿಲ್ಲ, ಸಾಮಾನ್ಯವಾಗಿ ಸತ್‌ಸಂಪ್ರದಾಯ ನಡೆದಿರುವುದು ಇದೆ. ಮಂತ್ರಿಗಳು ಇಲ್ಲದಿದ್ದರೆ ಏನು ಮಾಡಬೇಕು ? ಕರೆಸುತ್ತೇವೆಂದು ಹೇಳಿದ್ದಾರೆ. ಈಗಲೇ ಬೇಕು ಎಂದು ಹಠ ಹಿಡಿದರೆ ಹೇಗೆ ? ಅವರು ಸಾಯಂಕಾಲದೊಳಗೆ ಬರುತ್ತಾರೆ. ಮಾನ್ಯ ಯಡಿಯೂರಪ್ಪನವರೇ, ದಯವಿಟ್ಟು ತಾವು ಕೋಪಿಸಿಕೊಳ್ಳಬೇಡಿ ಸ್ವಾಮಿ.

(ಯಡಿಯೂರಪ್ಪನವರು ಬಾವಿಯೊಳಗಿನಿಂದಲೇ ಮಾತನಾಡುತ್ತಿದ್ದರು)

ಶ್ರೀ ವಿನಯಕುಮಾರ್ ಸೊರಕೆ.—ಮಾನ್ಯ ಯಡಿಯೂರಪ್ಪನವರೇ, ನಿಮಗೆ ಎಷ್ಟು ಕಳಕಳಿಯಿದೆಯೋ ನಮಗೂ ಅಷ್ಟೇ ಕಳಕಳಿಯಿದೆ.

ಶ್ರೀ ಪಾಟಾಳ್ ನಾಗರಾಜ್.—ಮಾನ್ಯ ಯಡಿಯೂರಪ್ಪನವರ ಜೊತೆಯಲ್ಲಿ ನಾನು ಸಹ ಅವರ ಧರಣಿಯಲ್ಲಿ ಭಾಗವಹಿಸುತ್ತೇನೆ. ಆದರೆ ಅವರು ಏನು ಕೋಪ ಮಾಡಿಕೊಂಡಿದ್ದಾರೆ, ಅವರ ಕೋಪಕ್ಕೆ ನನ್ನ ಬೆಂಬಲವಿಲ್ಲ. ಇದು ಸರಿಯಲ್ಲ. ಸಾಯಂಕಾಲದೊಳಗೆ ಮಂತ್ರಿಗಳನ್ನು ಕರೆಸುತ್ತೇವೆಂದು ಹೇಳಿದ್ದಾರೆ.

ಅಧ್ಯಕ್ಷರು.—ಕಂದಾಯ ಮಂತ್ರಿಗಳು ಸಾಯಂಕಾಲದೊಳಗೆ ಬಂದು ಉತ್ತರ ಹೇಳುತ್ತಾರೆಂದು ಹೇಳಿದ್ದಾರೆ.

ಶ್ರೀ ಪಾಟಾಳ್ ನಾಗರಾಜ್.—ಇದ್ದ ಪರಿಸ್ಥಿತಿಯನ್ನು ಅವರು ಹೇಳಿದ್ದಾರೆ. ನನಗೆ ಕಂದಾಯ ಸಚಿವರ ಬಗ್ಗೆ ನಂಬಿಕೆಯಿದೆ. ಈಗ ಕಂದಾಯ ಸಚಿವರು ಸಭೆಗೆ ಬಂದಿದ್ದಾರೆ. ಪರಿಸ್ಥಿತಿ ತಿಳಿ ವಾತಾವರಣಕ್ಕೆ ಬರಲಿ.

(ಗೊಂದಲ)

ಅಧ್ಯಕ್ಷರು.—ನಿಮ್ಮ ನಾಯಕರಾದ ಉಪ ಮುಖ್ಯಮಂತ್ರಿಗಳು ಎದ್ದು ನಿಂತಿದ್ದಾರೆ. ಅವರು ಏನು ಹೇಳುತ್ತಾರೆ ಸ್ವಲ್ಪ ಕೇಳಿ. ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಎಸ್. ಎಂ. ಕೃಷ್ಣ.—ಮಾನ್ಯ ಅಧ್ಯಕ್ಷರೆ, ಈ ಸದನವನ್ನು ತಾವು ಬಹಳ ಆಚ್ಚುಕಟ್ಟಾಗಿ ನಡೆಸುತ್ತಾ ಇದ್ದೀರಿ. ಸರ್ಕಾರದ ಪರವಾಗಿ ತಮ್ಮಲ್ಲಿ ಅತ್ಯಂತ ನಮ್ರತೆಯಿಂದ ಪ್ರಾರ್ಥನೆ ಮಾಡಿಕೊಳ್ಳತಕ್ಕದ್ದು ಏನೆಂದರೆ, ಇಂತಹ ವಿಚಾರಗಳು ಬಂದಾಗ ತಾವು ಮಾನ್ಯ ಸದಸ್ಯರಿಗೆ ಅಪ್ಪಣೆ ಕೊಡುವುದಕ್ಕೆ ಅಥವಾ ಕೊಡತಕ್ಕ ಸಮಯದಲ್ಲಿ ಸರ್ಕಾರಕ್ಕೂ ಕೂಡ ಇದರ ಬಗ್ಗೆ ಸೂಕ್ಷ್ಮವಾಗಿ ಇಂತಹ ವಿಚಾರ ಈ ದಿವಸ ಪ್ರಶ್ನೋತ್ತರ ವೇಳೆ ಆದಮೇಲೆ ಬರುತ್ತದೆ ಎನ್ನತಕ್ಕ ಸೂಚನೆಯನ್ನು ನಮಗೆ ಕೊಟ್ಟರೆ ತತ್‌ಕ್ಷಣ ನಾವು ಸಂಬಂಧಪಟ್ಟ ಮಂತ್ರಿಗಳನ್ನು ಇಲ್ಲಿಗೆ ಕರೆಸುವ ವಿಷಯವು ಮಾಡುವುದಕ್ಕೆ ಅನುಕೂಲವಾಗುತ್ತದೆ. ಅದಕ್ಕೇ ನಾನು ಹೇಳಿದ್ದು. ನನಗೆ ಕನಸು ಬೀಳಬೇಕಾಗಿತ್ತೆ ಎಂದು ಗ್ರಾಮ್ಯ ಭಾಷೆಯಲ್ಲಿ ಹೇಳಿದೆ. ಅದಕ್ಕೆ ಯಡಿಯೂರಪ್ಪನವರು ಇಷ್ಟು ರೋಷದಿಂದ, ಅವರ ಕೈಳ ಇಲ್ಲಿದೆ. ಅವರನ್ನು ಜನ ಆರಿಸಿ ಕಳುಹಿಸಿರುವುದು ಇಲ್ಲಿಗೆ. ಅವರು ಬಾವಿಯಲ್ಲಿ ಬಿದ್ದಿರುವುದು ನೋಡಿ ನನಗೆ ಪಶ್ಚಾತ್ತಾಪವುಂಟಾಗುತ್ತಿದೆ. ಅವರಿಗೆ ಕೋಪ ಬಂದಿರುವುದು ತಾವು ಬಾವಿಯಲ್ಲಿ ಬಿದ್ದಿರುವಾಗ ಬೇರೆಯವರೂ ಸಹ ಬಾವಿಯಲ್ಲಿ ಏತಕ್ಕೆ ಬೀಳಬಾರದು ಎಂಬುದು ತಮ್ಮ ಇಚ್ಛೆಯಾದರೆ ನಾನೇನು ಮಾಡುವುದಕ್ಕಾಗುತ್ತದೆ ? ರೆಡ್‌ಕಾರ್ಪೆಟ್ ಸ್ವಾಗತ ನಿಮಗೆ.

ಅಧ್ಯಕ್ಷರು.—ಮಾನ್ಯ ಯಡಿಯೂರಪ್ಪನವರೇ ಈಗ ಕಂದಾಯ ಮಂತ್ರಿಗಳು ಬಂದಿದ್ದಾರೆ, ಅವರು ಏನು ಹೇಳುತ್ತಾರೆಂದು ಕೇಳಲು ನಿಮ್ಮ ಸ್ಥಾನಕ್ಕೆ ಹೋಗಿ.

ಶ್ರೀ ಧರ್ಮಸಿಂಗ್.—ಏನು ವಿಷಯವೆಂದು ನನಗೆ ಗೊತ್ತು ಇಲ್ಲ.

ಶ್ರೀ ವಿಜಯಶಂಕರಪ್ಪಾರಶೆಟ್ಟಿ.—ಬಿಜೆಪಿಯವರ ಉದ್ದೇಶ ಇಷ್ಟೆ, ನಮ್ಮ ಸರ್ಕಾರ ಅಕ್ರಮ ಸಾಗುವಳಿಯನ್ನು ಸಕ್ರಮಗೊಳಿಸುವುದಕ್ಕೆ ಹೊರಟಿದೆ. ನಾವು ಗಲಾಟೆ ಮಾಡಿದ್ದರಿಂದ ಸರ್ಕಾರ ಮಾಡಿದೆಯೆಂದು ಹೆಗ್ಗಳಿಕೆ ತೆಗೆದುಕೊಳ್ಳುವುದಕ್ಕೆ ಸುಮ್ಮನೆ ಪ್ರಚಾರಕ್ಕೋಸ್ಕರ ಅವರು ಇದನ್ನು ಮಾಡುತ್ತಿದ್ದಾರೆ.

(ಆಡಳಿತ ಪಕ್ಷದ ಸದಸ್ಯರು ನಾಲ್ಕೈದು ಜನ ಒಟ್ಟಿಗೆ ಮಾತನಾಡುತ್ತಿದ್ದರು)

ಶ್ರೀ ಬಿ. ಸತ್ಯನಾರಾಯಣ.—ಮಾನ್ಯ ಅಧ್ಯಕ್ಷರೆ, ಅಕ್ರಮ ಸಾಗುವಳಿಯ ಬಗ್ಗೆ ಇಷ್ಟೊಂದು ಕಾಳಜಿ ಇರತಕ್ಕ ಕಾಂಗ್ರೆಸಿನವರು ಬಡವರ ಪರವಾಗಿರತಕ್ಕ ಬಗರ್ ಹುಕುಂ ಸಾಗುವಳಿ ಸಮಿತಿಗಳ ಮೀಟಿಂಗ್‌ಗೆ ಎಷ್ಟು ಸಾರಿ ಅಟೆಂಡ್ ಆಗಿದ್ದಾರೆನ್ನುವುದನ್ನು ಹೇಳಲು ಕೇಳಿ. ಸುಮ್ಮನೆ ರಾಜಕೀಯಕ್ಕೋಸ್ಕರ ಮತ್ತು ಪ್ರಚಾರಕ್ಕೋಸ್ಕರ ಮಾತನಾಡುವವರಿಗೆ ತಾವು ಅವಕಾಶ ಕೊಡಬಾರದು.

೧೨–೪೫ ಪಿ. ಎಂ.

† ಶ್ರೀ ಧರ್ಮಸಿಂಗ್ (ಸಮಾಜಕಲ್ಯಾಣ ಮತ್ತು ಕಂದಾಯ ಸಚಿವರು).—ಮಾನ್ಯ ಸಭಾಧ್ಯಕ್ಷರೇ ನನಗೆ ವಿಧಾನಪರಿಷತ್ತಿನಲ್ಲಿ ಕೆಲಸ ಇತ್ತು. ಅದಕ್ಕಾಗಿ ನಾನು ಅಲ್ಲಿ ಕುಳಿತಿದ್ದೆ. ಶ್ರೀ ಯಡಿಯೂರಪ್ಪನವರು ಈ ಪ್ರಶ್ನೆಯನ್ನು ಎತ್ತಿದ್ದಾರೆ ಅಂತ ಹೇಳಿ. ನನಗೆ ಗೊತ್ತಿತ್ತು ಈಗಾಗಲೇ ಈ ಒಂದು ಪ್ರಶ್ನೆ ಇದೆ. ನಿನ್ನೆ ವಿಧಾನಪರಿಷತ್ತಿನಲ್ಲಿ ನಾನು ಇದಕ್ಕೆ ಉತ್ತರವನ್ನು ಕೊಟ್ಟಿದ್ದೇನೆ. ಕರ್ನಾಟಕ ರಾಜ್ಯದಲ್ಲಿ ಈವರೆಗೆ ೧೦,೮೬,೦೨೦ ಅರ್ಜಿಗಳು ಬಂದಿವೆ. ೨೫ ಲಕ್ಷ ಎಕರೆ ಜಾಗವನ್ನು ಎಲ್ಲ ಕಡೆಗೆ ವಿತರಣೆ ಮಾಡಬೇಕಾಗಿದೆ. ಈ ಬಗರ್‌ಹುಕುಂ ಸಾಗುವಳಿಯನ್ನು ಯಾರ್ಯಾರು ಅಕ್ರಮವಾಗಿ ಮಾಡುತ್ತಿದ್ದಾರೆ. ಅದನ್ನು ಸಕ್ರಮಗೊಳಿಸತಕ್ಕಂಥ ಕಾರ್ಯಕ್ರಮ ರೂಪಿಸಲು ಅಕ್ಟೋಬರ್ ಒಳಗೆ ಮಾಡಿಯೇ ಬೇಕೆಂದು ಬಜೆಟ್‌ನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ನಾನು ಕೂಡ ಪದೆಪದೇ ಅದನ್ನೆ ಹೇಳಿದ್ದೇನೆ. ನಾನು ಕಂದಾಯ ಇಲಾಖೆಯನ್ನು ಪರಿಷ್ಕರಿಸಿಕೊಂಡಮೇಲೆ ಕರ್ನಾಟಕ ರಾಜ್ಯದಲ್ಲಿ ಏನೇನು ಆಗುತ್ತಿದೆ ಎಂದು ಪರಿಶೀಲನೆ ಮಾಡಿದ್ದೇನೆ. ಹಾಗೆ ಪರಿಶೀಲನೆ ಮಾಡುವಾಗ ಈಗಾಗಲೇ ಇತ್ಯರ್ಥ ಆಗತಕ್ಕಂಥಾದ್ದು ಏನಿದೆ, ಆದರಲ್ಲಿ ೫,೫೬ ಲಕ್ಷದಷ್ಟು ಸಹ ವಿತರಣೆ ಆಗಿಲ್ಲ. ಏಕೆಂದರೆ ಇದು ಎಕ್ಸಿಸ್ಟಿಂಗ್ ಏನು ಲ್ಯಾಂಡ್ ಗ್ರಾಂಟ್ ಕಮಿಟಿಗಳಿವೆ ಅಲ್ಲಿ ಸರಿಯಾಗಿ ಕೆಲಸ ಆಗುತ್ತಿಲ್ಲ ಎನ್ನತಕ್ಕಂಥಾದ್ದು ನನ್ನ ಗಮನಕ್ಕೆ ಬಂದಿದೆ. ಎಲ್ಲಾ ಕಡೆ ಅಂತ ಅಲ್ಲ, ಕೆಲವು ಕಡೆ ಕರ್ನಾಟಕ ರಾಜ್ಯದಲ್ಲಿ ಆಗಿದೆ. ಈಗ ನಾವು ಕಟ್ಟುನಿಟ್ಟಾದ ಒಂದು ಆದೇಶವನ್ನು ಕೊಟ್ಟಿದ್ದೇವೆ. ಪ್ರತಿತಿಂಗಳು ನಾಲ್ಕು ಸಲ ಮೀಟಿಂಗ್ ಕೊಡಬೇಕು, ನೂರು ಅರ್ಜಿಗಳನ್ನು ಇತ್ಯರ್ಥ ಮಾಡಲೇಬೇಕು. ಚೇರ್‌ಮನ್ ಬರಲಾರದೇಹೋದರೆ, ಮತ್ತೊಬ್ಬ ಚೇರ್ಮನ್‌ರನ್ನು ಆಯ್ಕೆಮಾಡಿ ಅಂದು ಮೀಟಿಂಗ್ ನಡೆಸಬೇಕು ಎನ್ನತಕ್ಕಂಥ ರೀತಿಯಲ್ಲಿ ಆದೇಶವನ್ನು ಹೊರಡಿಸಲಾಗಿದೆ. ಈಗಾಗಲೇ ಕರ್ನಾಟಕ ರಾಜ್ಯದಲ್ಲಿ ೨೧ ಲಕ್ಷದ ೯೩ ಸಾವಿರ ಎಕರೆ ಗೋಮಾಳ ಲ್ಯಾಂಡ್ ಇದೆ. ಇದರಲ್ಲಿ ೯ ಲಕ್ಷ ೪೩ ಸಾವಿರ ಎಕರೆಯಲ್ಲಿ ಹರಿಜನರು–ಗಿರಿಜನರು ಸಾಗುವಳಿಯನ್ನು ಮಾಡುತ್ತಿದ್ದಾರೆ. ಇವತ್ತು ನಾವು ಗೋಮಾಳವನ್ನು ನಿಗದಿ ಮಾಡತಕ್ಕಂಥ ರೀತಿಯಲ್ಲಿ. ಜಿಲ್ಲಾಧಿಕಾರಿಗಳು ಇದನ್ನು ಇತ್ಯರ್ಥ ಮಾಡಬೇಕಾಗಿತ್ತು. ಆದರೆ ಜಿಲ್ಲಾಧಿಕಾರಿಗಳಿಗೆ ಸಾಕಷ್ಟು ಕೆಲಸಕಾರ್ಯಗಳು ಇದ್ದೇಇವೆ. ಜಿಲ್ಲಾಧಿಕಾರಿಗಳಿಗೆ ಹೋಗಿ ಅದನ್ನು ಮಾಡುವುದಕ್ಕೆ ಆಗುವುದಿಲ್ಲ. ಆದಕ್ಕೆ ನಾವು ಪೊನ್ನೆ ಸಚಿವ ಸಂಪುಟಸಭೆಯಲ್ಲಿ ಜಿಲ್ಲಾಧಿಕಾರಿಗಳನ್ನು ಬಿಟ್ಟು ಅಸಿಸ್ಟೆಂಟ್ ಕಮೀಷನರ್‌ಗೆ ಆ ಪವರ್ಸ್‌ನ್ನು ಡೆಲಿಗೇಟ್ ಮಾಡಿದ್ದೇವೆ. ಹೊಸ ಸಂಪುಟದಲ್ಲಿ ಈ ಬಗ್ಗೆ ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಇದನ್ನು ತೆಗೆದುಕೊಂಡಮೇಲೆ ಮತ್ತೊಂದು ಪ್ರಶ್ನೆ ತಾವೇನು ಇವತ್ತು ಕರ್ನಾಟಕ ರಾಜ್ಯದಲ್ಲಿ ಸರ್ವೇಯರ್‌ಗಳು ಇಲ್ಲವೆಂದು ಹೇಳಿ ಎತ್ತಿದ್ದೀರಿ. ಅದು ನನಗೆ ಗೊತ್ತಿರಲಿಲ್ಲ. ಒಂದು ಆರು ತಿಂಗಳ ಹಿಂದೆ ಸರ್ವೇಯರ್‌ಗಳ ರಿಕ್ರೂಟ್‌ಮೆಂಟ್ ಆಗತಕ್ಕಾಂಥಾದ್ದು ನಿಂತು ಹೋಗಿತ್ತು. ನಾನು ಬಂದಮೇಲೆ ೧೩೦೦ ಸರ್ವೇಯರ್‌ಗಳನ್ನು ತೆಗೆದುಕೊಳ್ಳಬೇಕೆಂದು ಸರ್ಕಾರ ಈಗಾಗಲೇ ಒಂದು ತೀರ್ಮಾನವನ್ನು ತೆಗೆದುಕೊಂಡಿದೆ. ಈಗ ನಾವು ರಿಕ್ರೂಟ್‌ಮೆಂಟ್ ಕಮಿಟಿಯನ್ನು ಕೂಡ ಕಾನ್ಸ್‌ಟ್ಯೂಟ್ ಮಾಡಿದ್ದೇವೆ. ಮತ್ತು ೧೩೦೦ ಜನ ಸರ್ವೇಯರ್‌ಗಳನ್ನು ರಿಕ್ರೂಟ್

† ಈ ಚಿಹ್ನೆಯು ಮಾನ್ಯ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿರುವುದೆಂದು ಸೂಚಿಸುತ್ತದೆ.

ಮಾಡುತ್ತಿದ್ದೇವೆ. ಎಲ್ಲಿ ಬಗರ್‌ಹುಕುಂ ಸಾಗುವಳಿ ಮಾಡುತ್ತಿದ್ದಾರೆ, ಅಲ್ಲಿಗೆ ಇವರು ಹೋಗಬೇಕಾಗುತ್ತದೆ, ನಮ್ಮ ಡಿಪಾರ್ಟ್‌ಮೆಂಟ್ ಆಗಲಿ, ಬೇರೆ ರೀತಿಯ ಕೆಲಸಗಳನ್ನೂ ಕೂಡ ಮಾಡಬೇಕಾಗುತ್ತದೆ. ಅದನ್ನು ಕೂಡ ನಾವು ತೆಗೆದುಕೊಂಡಿದ್ದೇವೆ. ಇದರ ಜೊತೆಗೆ ಮತ್ತೆ ಅಡಿಶನಲ್ ಆಗಿ ಲ್ಯಾಂಡ್ ಗ್ರಾಂಟ್ ಕಮಿಟಿ ಮಾಡಬೇಕಾ ಅಂತಹೇಳಿ, ಎಕ್ಸಿಸ್ಟಿಂಗ್ ನಮ್ಮ ಲ್ಯಾಂಡ್ ರೆವಿನ್ಯೂ ಆ್ಯಕ್ಟ್‌ನಲ್ಲಿ ಕೂಡ ಏನು ತಿದ್ದುಪಡಿ ಮಾಡಬೇಕಾ. ರೂಲ್ಸ್‌ನಲ್ಲಿ ತಿದ್ದುಪಡಿ ಮಾಡಬೇಕಾ ಅಂತ ರೇಳಿ ಲಾ ಡಿಪಾರ್ಟ್‌ಮೆಂಟ್‌ಗೆ ರೆಫರ್ ಮಾಡಿದ್ದೇವೆ, ತದನಂತರ ಇಪತ್ತು ದ್ರೈಪ್ ಮಾಡಬೇಕು ಎನ್ನಶಕ್ಯಂಥಾದ್ದು ಸರ್ಕಾರದ ನಿರ್ಧಾರ ಇದೆ. ಅದನ್ನು ಮಾಡಬೇಕಾದರೆ ಇನ್ನೊಂದು ಅಡಿಶನಲ್ ಕಮಿಟಿ ಮಾಡಬೇಕು ಎನ್ನುವುದನ್ನು ಕೂಡ ಗಮನಕ್ಕೆ ತೆಗೆದುಕೊಂಡಿದ್ದೇವೆ. ಸರ್ಕಾರ ಏನೂ ಕ್ರಮ ತೆಗೆದುಕೊಳ್ಳಲಾರದೆ ಸುಮ್ಮನೆ ಹೇಳಿಲ್ಲ. ಅದನ್ನು ಮಾಡುತ್ತೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನನಗೆ ಕ್ಲಾರಿಫಿಕೇಶನ್ ಬೇಕು. ತಾವೇ ಹೇಳಿದ ಪ್ರಕಾರ ಗೋಮಾಳದಲ್ಲಿ ಬಗರ್‌ಹುಕುಂ, ಅಥವಾ ಅಕ್ರಮ ಸಾಗುವಳಿ ಮಾಡಿರತಕ್ಕಂಥವರಿಗೆ ಸಾಗುವಳಿ ಚೀಟಿ ಕೊಡಬೇಕಾದರೆ. ಇದುವರೆಗೆ ಜಿಲ್ಲಾಧಿಕಾರಿಗಳು ಬಂದು ಸ್ಪಾಟ್ ಇನ್‌ಸ್ಪೆಕ್ಷನ್ ಮಾಡಿ ಕ್ಲಿಯರೆನ್ಸ್ ಸರ್ಟಿಫಿಕೇಟ್ ಕೊಡಬೇಕಾಗಿತ್ತು. ತಾವು ಈ ಸಮಸ್ಯೆಗೆ ಪರಿಹಾರ ಕಂಡುಹಿಡಿಯುವುದಕ್ಕೆ ಮುಂಚೆಯೇ ತಹಸೀಲ್ದಾರ್‌ಅವರಿಗೆ ಈ ಅಧಿಕಾರವನ್ನು ಕೊಟ್ಟಿದ್ದರೆ, ಈ ಸಮಸ್ಯೆ ಬರುತ್ತಿರಲಿಲ್ಲ. ಇತ್ತೀಚೆಗೆ ತಹಸೀಲ್ದಾರ್‌ಗೆ ಈ ಅಧಿಕಾರವನ್ನು ಕೊಟ್ಟಿದ್ದೀರಿ, ತುಂಬ ಸಂತೋಷ. ಮಾನ್ಯ ಸ್ವಾಮಿರಾವ್ ಅವರು ಮಾತನಾಡುತ್ತಾ ಒಂದು ಮಾತನ್ನು ಹೇಳಿದರು . ಅದು ರೆಕಾರ್ಡಿಗೆ ಹೋಗಿದೆ. ತಾವು ಶಿವಮೊಗ್ಗ ಜಿಲ್ಲೆಯ ರೆಕಾರ್ಡ್ಸ್‌ನ್ನು ತೆಗೆದುನೋಡಿ. ಅಕ್ರಮ ಸಾಗುವಳಿ ಸಕ್ರಮ ಮಾಡಿರುವಂಥಾದ್ದು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನಲ್ಲಿ ಹೆಚ್ಚಾಗಿದೆಯೋ, ಬೇರೆ ತಾಲ್ಲೂಕುಗಳಲ್ಲಿ ಹೆಚ್ಚಾಗಿದೆಯೋ ಎಂಬುದನ್ನು ತಾವು ಪರಾಂಬರಿಸಬೇಕು. ಯಾರಿಗೆ ಕಳಕಳಿ ಇದೆ ಎಂಬುದನ್ನು ಆ ಜನರೇ ತೀರ್ಮಾನ ಮಾಡಲಿ. ನಾನು ತಮ್ಮಿಂದ ಏನು ಕ್ಲಾರಿಫಿಕೇಶನ್ ಕೇಳುತ್ತಿದ್ದೇನೆ ಎಂದರೆ, ತಾವು ಹೇಳುವ ಪ್ರಕಾರ ಇನ್ನೂ ೮ ಲಕ್ಷ ಅರ್ಜಿಗಳು ಪೆಂಡಿಂಗ್ ಇವೆ ಎಂದು ಅದಕ್ಕೆ ಈಗಿರುವಂತೆ ತಾಲ್ಲೂಕಿನಲ್ಲಿರುವ ಇಬ್ಬರು-ಮೂವರು ಸರ್ವೇಯರುಗಳಿಂದ ಈ ಕೆಲಸ ಆಗುವುದಿಲ್ಲ. ಒಂದು ದಿವಸಕ್ಕೆ ಒಬ್ಬ ಸರ್ವೇಯರ್ ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ಕೆಲಸ ಮಾಡಿದರೂ, ನಾಲ್ಕೈದು ಜನರ ಸಹಕಾರದೊಂದಿಗೆ ಒಂದು ಮೂರು ರೆಕಾರ್ಡುಗಳನ್ನು ಫೈನಲೈಸ್ ಮಾಡುವುದಕ್ಕೆ ಸಾಧ್ಯವಿದೆ. ಕನಿಷ್ಟ ೧೦ ಜನ ಸರ್ವೇಯರ್‌ಗಳು ತಿಂಗಳಪೂರ್ತಿ ಈ ಸಕ್ರಮಗೊಳಿಸುವ ಕೆಲಸವನ್ನು ಮಾಡಿದೇ ಇದ್ದರೆ, ಅದಕ್ಕಾಗಿ ಸಮಯವನ್ನು ವಿನಿಯೋಗ ಮಾಡಿದೇ ಇದ್ದರೆ, ಇನ್ನು ಐದು ವರ್ಷವಾದರೂ ಇದು ಆಗೇ ಇರುವಂಥ ಪರಿಸ್ಥಿತಿ ಇದೆ. ಅದಕ್ಕೇನು ಕ್ರಮ ತೆಗೆದುಕೊಳ್ಳುತ್ತೀರಿ ಎನ್ನುವುದು ನಂಬರ್ ಒನ್. ಎರಡನೇಯದು, ತಮಗೆ ಗೊತ್ತಿರುವಂತೆ ಪ್ರಿಸ್ಕ್ರೈಬ್ಡ್ ಫಾರ್ಮ್‌ನಲ್ಲೇ ಅರ್ಜಿಯನ್ನು ಹಾಕಬೇಕು. ಕಳೆದ ಹತ್ತು ವರ್ಷಗಳಿಂದ ಅವರು ಅರ್ಜಿಗಳನ್ನು ಹಾಕಿಕೊಂಡು ಬಂದಿದ್ದಾರೆ. ಆದರೆ ಅವರು ಪ್ರಿಸ್‌ಕ್ರೈಬ್ಡ್ ಫಾರ್ಮ್‌ನಲ್ಲಿ ಅರ್ಜಿ ಹಾಕಿಲ್ಲವೆಂದು ಅವರಿಗೆ ಅರ್ಜಿಯೇ ಮಾಡುತ್ತಿಲ್ಲ ಹಾಗೂ ಅವರ ಅರ್ಜಿಗಳನ್ನು ವಿಲೇವಾರಿ ಮಾಡುವುದಕ್ಕೆ ಇದರಿಂದ ಆಗುತ್ತಿಲ್ಲ. ಆದ್ದರಿಂದ ಇದರ ಬಗ್ಗೆ ಚರ್ಚೆಯಾದಾಗ ಮುಖ್ಯಮಂತ್ರಿಗಳು ಇಲ್ಲಿ ಒಪ್ಪಿಕೊಂಡರು, ಈ ತರಹ ಯಾರು ಅರ್ಜಿ ಹಾಕಿಲ್ಲ, ಅಲ್ಲಿ ಅವರು ಹತ್ತಾರು ವರ್ಷಗಳಿಂದ ಬಗರ್‌ಹುಕುಂ ಸಾಗುವಳಿ ಮಾಡುತ್ತಿದ್ದಾರೆ, ಅಂತಹವರಿಗೆ ಅರ್ಜಿ ಹಾಕುವುದಕ್ಕೆ ಅವಕಾಶವನ್ನು ಕೊಡುತ್ತೇವೆ ಎಂದು ಅವರು ಏನು ಭರವಸೆಯನ್ನು ಕೊಟ್ಟಿದ್ದಾರೆ, ಇದು ತಮಗೆ ಗೊತ್ತಿದೆ. ಇದು ಎರಡಲ್ಲದೆ, ಮೂರನೇಯದು ನಾನು ಪ್ರಸ್ತಾಪ ಮಾಡುತ್ತಿರುವಂಥಾದ್ದು ಏನೆಂದರೆ, ಈಗಾಗಲೇ ಕಳೆದ ೨೫-೩೦ ವರ್ಷಗಳಿಂದ ಈ ಬಗರ್‌ಹುಕುಂ ಸಾಗುವಳಿಯನ್ನು ಅರಣ್ಯ ಇಲಾಖೆಗೆ ಸೇರಿದ ಸಿ ಅಂಡ್ ಡಿ ಲ್ಯಾಂಡ್‌ನಲ್ಲಿ ಮಾಡುತ್ತಿದ್ದಾರೆ. ಇದು ಗೊತ್ತಿದ್ದರೂ ಸಹ ಈ ಲ್ಯಾಂಡ್‌ನ್ನು ಅರಣ್ಯ ಇಲಾಖೆಗೆ ವರ್ಗಾವಣೆ ಮಾಡಿಬಿಟ್ಟಿದ್ದಾರೆ. ಹೀಗಾಗಿ ಈ ಸದನದಲ್ಲಿ ನೀವೇ ಉತ್ತರ ಕೊಟ್ಟಿರುವ ಪ್ರಕಾರ ಸುಮಾರು ನಾಲ್ಕೂವರೆ ಲಕ್ಷ ಕುಟುಂಬಗಳ ಪೈಕಿ ಶೇಕಡಾ ಏಪ್ಪತ್ತು ಭಾಗ ಹರಿಜನ-ಗಿರಿಜನರು ಹಾಗೂ ಅವರಿಗೆ ಸಂಬಂಧಪಟ್ಟವರು ಈ ಬಗರ್‌ಹುಕುಂ ಸಾಗುವಳಿಯನ್ನು ಈ ಅರಣ್ಯ ಇಲಾಖೆಗೆ ಸೇರಿದ ಜಮೀನಿನಲ್ಲಿ ಮಾಡುತ್ತಿದ್ದಾರೆ, ಇವರಿಗೆ ತಾವು ಅಕ್ರಮ ಸಾಗುವಳಿಯನ್ನು ಸಕ್ರಮ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ? ಇವತ್ತು ಕೇಂದ್ರ ಸರ್ಕಾರ ಅಡ್ಡಿ ಬರುತ್ತದೆ ಎಂದು ತಮಗೆ ಗೊತ್ತಿದೆ. ಅರಣ್ಯ ಇಲಾಖೆಯ ಜಮೀನನ್ನು ಕೊಡುವುದಕ್ಕೆ ಬರುವುದಿಲ್ಲ. ಸಿ ಅಂಡ್ ಡಿ ಲ್ಯಾಂಡ್, ಲಕ್ಷಾಂತರ ಎಕರೆಯನ್ನು ಅರಣ್ಯ ಬೆಳೆಸುವುದಕ್ಕೆ ಕೊಡುತ್ತಾ ಇದ್ದೇವೆ. ಈ ರೀತಿ ಕೊಟ್ಟಾಗ ಈ ಅರಣ್ಯ ಜಮೀನನ್ನು ವಾಪಸ್ಸು ತೆಗೆದುಕೊಂಡು, ಅವರಿಗೆ ಸಕ್ರಮ ಮಾಡುವುದಕ್ಕೆ ಏನಾದರೂ ಕಾರ್ಯಕ್ರಮ ಕೈಗೊಳ್ಳುತ್ತೀರಾ ? ಈ ಅಪಧಿಯನ್ನು

ವಿಸ್ತರಣೆ ಮಾಡುತ್ತೀರಾ ? ಇವರಿಗೆ ನೀವು ಅನುಕೂಲ ಮಾಡಿಕೊಡುತ್ತೀರಾ ಎಂದು, ಇದರ ಬಗ್ಗೆ ನೀವು ಕ್ಲಾರಿಫಿಕೇಶನ್ ಕೊಟ್ಟರೆ ಸಾಕಾಗುತ್ತದೆ.

ಶ್ರೀ ಧರ್ಮಸಿಂಗ್.—ಈ ಅಕ್ರಮ ಸಾಗುವಳಿ ಮಾಡುತ್ತಿರುವ ಜಮೀನನ್ನು ಸಕ್ರಮಗೊಳಿಸುವ ಬಗ್ಗೆ ಈಗಾಗಲೇ ನಾವು ೧೩೦ ಸರ್ವೆಯರ್‌ಗಳನ್ನು ಭರ್ತಿ ಮಾಡತಕ್ಕಂಥ ಪ್ರಯತ್ನವನ್ನು ಮಾಡಿದ್ದೇವೆ. ಇನ್ನೂ ಹೆಚ್ಚು ಜನರುಗಳು ಬೇಕು ಎಂದರೆ, ಅದನ್ನು ಕೂಡ ನಾವು ಪರಿಶೀಲನೆ ಮಾಡುತ್ತೇವೆ. ಎರಡನೆಯದು, ಅವಧಿಯನ್ನು ವಿಸ್ತರಿಸುವ ಬಗ್ಗೆ ಕೇಳಿದ್ದಾರೆ. ಈಗಾಗಲೇ ೧೦ ಲಕ್ಷ ೮೬ ಸಾವಿರ ಅರ್ಜಿಗಳು ಬಂದಿವೆ. ಮುಂದೆ ಇದನ್ನು ಎಕ್ಸ್‌ಟೆನ್‌ಶನ್ ಮಾಡಬೇಕೇ ಬೇಡವೇ ಎನ್ನುವುದರ ಬಗ್ಗೆ ಕೂಡ ಸರ್ಕಾರ ಪರಿಶೀಲನೆ ಮಾಡುತ್ತಿದೆ. ಏಕೆಂದರೆ ಅನೇಕ ಕಡೆ ಶಾಸಕರು ಮನವಿ ಸಲ್ಲಿಸಿದ್ದಾರೆ. ಇದನ್ನು ಕೂಡ ವಿಚಾರ ಮಾಡೋಣ. ಸಿ. ಅಂಡ್ ಡಿ. ಲ್ಯಾಂಡ್ ಬಗ್ಗೆ ಸೆಂಟ್ರಲ್ ಆಕ್ಟ್ ಅಡ್ಡಬರುತ್ತದೆ ಎನ್ನುವುದಿದೆ, ಅದರ ಬಗ್ಗೆ ಕೂಡ ಸಮಾಲೋಚನೆ ಮಾಡಿ ಕ್ರಮ ತೆಗೆದುಕೊಳ್ಳೋಣ. ಒಟ್ಟಾರೆ ಹೇಳಬೇಕಾದರೆ, ಕರ್ನಾಟಕ ರಾಜ್ಯದಲ್ಲಿ ಅಕ್ರಮ ಸಾಗುವಳಿ ಮಾಡುತ್ತಿರುವ ೧೦ ಲಕ್ಷ ೮೬ ಸಾವಿರ ಜನ ಏನಿದ್ದಾರೆ, ಇದನ್ನು ಸಕ್ರಮಗೊಳಿಸುವ ಕೆಲಸವನ್ನು ಬಹಳ ತೀವ್ರಗತಿಯಲ್ಲಿ ಏನು ವ್ಯವಸ್ಥಿತವಾಗಿ ಸರ್ಕಾರ ಮಾಡಬೇಕಾಗಿದೆ ಅದರ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಂಡಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಈ ಅವಧಿಯನ್ನು ವಿಸ್ತರಣೆ ಮಾಡಬೇಕು. ಅರಣ್ಯ ಇಲಾಖೆಯ ಜಮೀನನ್ನು ಸಾಗುವಳಿ ಮಾಡುವುದಕ್ಕೆ ಸಕ್ರಮ ಮಾಡುವುದರ ಬಗ್ಗೆ ನೀವು ಕಾರ್ಯಕ್ರಮವನ್ನು ರೂಪಿಸಬೇಕು. ಇದರ ಬಗ್ಗೆ ಒಂದು ನಿರ್ಧಾರ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಸರ್ಕಾರಕ್ಕೆ ಇದರ ಬಗ್ಗೆ ಕಳಕಳಿ ಇಲ್ಲವೆಂದು ಹೇಳಿ ಪ್ರತಿಭಟನೆ ಮಾಡಿ ನಾವು ಹೊರಗೆ ಹೋಗ್ಬೇಕಾಗುತ್ತದೆ.

ಶ್ರೀ ಧರ್ಮಸಿಂಗ್,—ಯಡಿಯೂರಪ್ಪನವರೇ, ಇದು ಒಹಳ ದಿವಸವಿಂದ ಇದೆ. ಇದು ಸರ್ಕಾರದ ಕಾರ್ಯಕ್ರಮ. ಇದು ಒಂದೇ ದಿವಸದಲ್ಲಿ ಪ್ರಾರಂಭವಾದ ಕಾರ್ಯಕ್ರಮ ಅಲ್ಲ. ಇದು ಆರು ತಿಂಗಳ ಹಿಂದೆ ಪ್ರಾರಂಭವಾದುದಲ್ಲ. ಬಹಳ ವರ್ಷಗಳಿಂದ ನಡೆಯುತ್ತಿದೆ. ಇದರ ಬಗ್ಗೆ ಮೊದಲೇ ಏಕೆ ಅಗಲಿಲ್ಲವೆಂದು ಹೇಳಿದರೆ, ಈಗ ಸರ್ಕಾರ ಕಾಳಜಿ ವಹಿಸಿದೆ. ಮಾನ್ಯ ವೆಂಕಟಪ್ಪ ಅವರು ತಹಶೀಲ್ದಾರರಿಗೆ ಜೀಪುಗಳು ಇಲ್ಲವೆಂದು ಹೇಳಿದ್ದಾರೆ. ಈಗ ನಾವು ೪೨ ಜೀಪುಗಳನ್ನು ತಹಶೀಲ್ದಾರುಗಳಿಗೆ ಒದಗಿಸಿಕೊಟ್ಟಿದ್ದೇವೆ.

ಅಧ್ಯಕ್ಷರು.—ಈಗ ಶೂನ್ಯವೇಳೆ ಮುಕ್ತಾಯವಾಯಿತು, ಇನ್ನು ವಿತ್ತೀಯ ಕಾರ್ಯಕಲಾಪಗಳು. ಶ್ರೀ ಕಾಗೋಡು ತಿಮ್ಮಪ್ಪನವರು ಮಾತನಾಡಬೇಕು.

ಶ್ರೀ ಬಸವರಾಜರಾಯರೆಡ್ಡಿ.—ಗ್ರಾಮ ಪಂಚಾಯತಿ ಚುನಾವಣೆ ವಿಷಯದಲ್ಲಿ ಕೊಲೆ ಬೆದರಿಕೆ ಯನ್ನು ಹಾಕಿದ್ದಾರೆ. ಆ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ನನಗೆ ಅನುಮತಿ ಕೊಡಬೇಕು.

ಅಧ್ಯಕ್ಷರು.—ನಾನು ಮೆನ್ಷೆ ಮಾಡಿದ್ದೇನೆ. ನಿಮ್ಮ ಪತ್ರ ನನಗೆ ಬಂದಿಲ್ಲ. ಈಗ ವಿತ್ತೀಯ ಕಾರ್ಯಕಲಾಪಗಳು. ಕಾಗೋಡು ತಿಮ್ಮಪ್ಪನವರು ಮಾತನಾಡಬೇಕು.

ಶ್ರೀ ಬಸವರಾಜರಾಯರೆಡ್ಡಿ.—ಚುನಾವಣೆ ಹೇಗೆ ನಡೆದಿದೆ ಎನ್ನುವುದಕ್ಕೆ ರಾಜ್ಯದ ಮುಖ್ಯ ಚುನಾವಣಾಧಿಕಾರಿಗಳು...ನನಗೆ ತಾವು ಅನುಮತಿಯನ್ನು ಕೊಡಲೇಬೇಕು. ತಾವು ದ್ವಿಮುಖ ನೀತಿಯನ್ನು ಅನುಸರಿಸಬಾರದು ಅಂತ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ತಾವು ಪತ್ರವನ್ನು ಕಳಿಸಿಲ್ಲ. ಆದ್ದರಿಂದ ಅದಕ್ಕೆ ಅನುಮತಿಯನ್ನು ಕೊಡುವುದಿಲ್ಲ.

ಶ್ರೀ ಬಸವರಾಜರಾಯರೆಡ್ಡಿ.—ತಾವು ಅನುಮತಿಯನ್ನು ನನಗೆ ಕೊಡಬೇಕು. ಕೊಲೆಯು ಬೆದರಿಕೆಯಾಗಿದೆ....

(ಈ ಸಂದರ್ಭದಲ್ಲಿ ಮಾನ್ಯ ಸದಸ್ಯರು ಸಭಾಧ್ಯಕ್ಷರ ಪೀಠದ ಸಮೀಪಕ್ಕೆ ಹೋಗಿ ಒತ್ತಾಯ ಮಾಡತೊಡಗಿದರು)